











# ಗ್ರಾಮ ವಿಕಾಸ

## ಯೋಜನೆ ಮಾರ್ಗಸೂಚಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು-560 001

"

ಭಾರತವನ್ನು ಆದರ್ಶ ದೇಶವನ್ನಾಗಿಸುವ
ನಿಟ್ಟಿನಲ್ಲಿ ಮಾದರಿ ಗ್ರಾಮ ರಚನೆ ಕೆಲಸ
ಕಷ್ಟವೆಂದು ನನಗೂ ತಿಳಿದಿದೆ.
ಆದರೆ, ಒಬ್ಬ ವ್ಯಕ್ತಿ ಒಂದು
ಆದರ್ಶ ಗ್ರಾಮದ
ಬಗ್ಗೆ ಕಾಣುವ ಕನಸು
ಖಂಡಿತಾ ನನಸಾಗುವುದು.
ಇಡೀ ಭಾರತದ ಅಭಿವೃದ್ಧಿಗೆ
ಒಬ್ಬ ವ್ಯಕ್ತಿಯ ಜೀವಿತಾವಧಿ ಬಹಳ ಕಡಿಮೆ.
ಆದರೆ ಒಬ್ಬ ವ್ಯಕ್ತಿ
ಒಂದು ಆದರ್ಶ ಗ್ರಾಮವನ್ನು ಕಟ್ಟಬಲ್ಲ.
ಆತ ದೇಶಕ್ಕೆ ಮಾತ್ರವಲ್ಲ
ಇಡೀ
ವಿಶ್ವಕ್ಕೆ ಮಾದರಿಯಾಗಬಲ್ಲ.

"

– ಮಹಾತ್ಮಗಾಂಧಿ





## ಸಂದೇಶ

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

ಪ್ರಿಯ ಬಂಧುಗಳೇ,

ಸರಕಾರದ ಯೋಜನೆಗಳ ಫಲವನ್ನು ಪಂಚಾಯತ ರಾಜ್ ಸಂಸ್ಥೆಗಳ ಮುಖಾಂತರ ಗ್ರಾಮೀಣ ಜನತೆಗೆ ನಿಗಧಿತ ಕಾಲದಲ್ಲಿ ತಲುಪಿಸುವ ಮಹತ್ವದ ಹೊಣೆಗಾರಿಕೆ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಜವಾಬ್ದಾರಿ ಹೊತ್ತಿರುವವರ ಮೇಲಿದೆ. ಈ ಗುರುತರ ಹೊಣೆಗಾರಿಕೆಯನ್ನು ಅತ್ಯಂತ ಕ್ರೀಯಾಶೀಲರಾಗಿ ನಿರ್ವಹಿಸುವುದರ ಜೊತೆಗೆ ಪಾರದರ್ಶಕತೆಗೆ ಹೆಚ್ಚು ಒತ್ತು ನೀಡುತ್ತೀರೆಂದು ಭಾವಿಸುವೆ.

ಗ್ರಾಮ ಸ್ವರಾಜ್ಯ ಸ್ಥಾಪನೆಯ ಗುರಿಯತ್ತ ಸಾಗಿರುವ ಪಂಚಾಯತ ರಾಜ್ ವ್ಯವಸ್ಥೆಯಲ್ಲಿ, ವಿವಿಧ ಹಂತಗಳಲ್ಲಿ ಚುನಾಯಿತ ಜನ ನಾಯಕರು ಹಾಗೂ ಜನಸಮುದಾಯದ ಪಾಲ್ಗೋಳ್ಳುವಿಕೆಯ ಮೂಲಕ ಅಭಿವೃದ್ದಿ ಯೋಜನೆಗಳು ಅನುಷ್ಠಾನಗೊಳ್ಳಬೇಕಾಗಿರುವದರಿಂದ ಜನಪ್ರತಿನಿಧಿಗಳು, ಜನ ಸಮುದಾಯ ಹಾಗೂ ಅಧಿಕಾರಿಗಳು ಸಮನ್ವಯ ಸಾಧಿಸಿದಾಗಲೇ ಅಭಿವೃದ್ದಿ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತವೆ.

ಸಂವಿಧಾನದ 73ನೇ ತಿದ್ದುಪಡಿಯ ಆಶಯಗಳನ್ನು ಈಡೇರಿಸಬೇಕು. ಸಾಮಾಜಿಕ ಸಮಾನತೆ ಸಾಧಿಸುವುದರ ಜೊತೆಗೆ ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು. ಶತ ಶತಮಾನಗಳಿಂದ ಅಧಿಕಾರ ವಂಚಿತ ವರ್ಗಕ್ಕೆ ಅಧಿಕಾರ ನೀಡಲು ಅಧಿಕಾರ ವಿಕೇಂದ್ರಿಕರಣ ಮಾಡಲಾಗಿದೆ. ಮೀಸಲಾತಿ ಮೂಲಕ ನಡೆದಿರುವ ಮೌನ ಕ್ರಾಂತಿ ಯಶಸ್ವಿಯಾಗಲು ತನ್ಮೂಲಕ ಸಾಮಾಜಿಕ ನ್ಯಾಯ ಸಾಧಿಸಲು ಬಹಳ ಸಮರ್ಪಣ ಭಾವದಿಂದ ಕೆಲಸ ಮಾಡಬೇಕು.

ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣ ಅಭಿವೃದ್ಧಿಯ ಕಲ್ಪನೆಯನ್ನು ಪುನರ್ ವ್ಯಾಖ್ಯಾನ ಮಾಡಲಾಗಿದೆ. ಗ್ರಾಮೀಣ ಬದುಕಿನ ನೈಜ ಅವಶ್ಯಕತೆಗಳನ್ನು ಮನಗಂಡು ಕಾರ್ಯಕ್ರಮ ರೂಪಿಸಲಾಗಿದೆ. ಈ ಹಿನ್ನಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಕಲ್ಪನೆಯನ್ನು ಸಾಕಾರಗೊಳಿಸಲು ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ “ಗ್ರಾಮ ವಿಕಾಸ ಯೋಜನೆ”ಯನ್ನು 189 ಗ್ರಾಮೀಣ ವಿಧಾನಸಭಾ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅಗತ್ಯ ಅನುದಾನ ಒದಗಿಸಲಾಗಿದೆ. ಯೋಜನೆಯನ್ನು ವಾಸ್ತವಿಕ ನೆಲಗಟ್ಟಿನಲ್ಲಿ ಜಾರಿಗೆ ತರಬೇಕಾದ ಜವಾಬ್ದಾರಿ ಅನುಷ್ಠಾನದ ಹೊಣೆ ಹೊತ್ತವರ ಮೇಲಿದೆ. ನಾವೆಲ್ಲ ಈ ಕಾರ್ಯ ನಿಭಾಯಿಸಬೇಕು. ಗ್ರಾಮೀಣ ವಿಕಾಸ ಯೋಜನೆಯನ್ನು ಇಲಾಖೆಯ ಇತರ ಕಾರ್ಯಕ್ರಮಗಳೊಂದಿಗೆ ಸಮೀಕರಿಸಿ ಜಾರಿಗೊಳಿಸಲು ಮಾರ್ಗೋಪಾಯಗಳನ್ನು ಗ್ರಾಮ ವಿಕಾಸ ಮಾರ್ಗಸೂಚಿ ಕೈಪಿಡಿಯಲ್ಲಿ ನೀಡಲಾಗಿದೆ. ಇದರ ಮಾರ್ಗದರ್ಶನದಲ್ಲಿ ಯೋಜನೆಯ ಯಶಸ್ಸಿಗೆ ಸಮರ್ಪಿತರಾಗಿ ಕೆಲಸ ಮಾಡಲು ಒತ್ತಾಯಿಸುತ್ತೇನೆ.

ಸಮಾಜದ ಅತ್ಯಂತ ಕೆಳ ಸ್ಥರದಲ್ಲಿರುವ ಬಡವರ ಕಲ್ಯಾಣವೇ ಸರಕಾರದ ಗುರಿ, ಬಹುಕಾಲದಿಂದ ಶೋಷಣೆಗೊಳಗಾಗಿರುವ ಜನ ಸಮುದಾಯವನ್ನು ಶೋಷಣೆ ಮುಕ್ತರನ್ನಾಗಿ ಮಾಡುವುದೇ ಬಯಕೆ. ಅಧಿಕಾರ ವಿಕೇಂದ್ರಿಕರಣ ಹಾಗೂ ಮೀಸಲಾತಿ ಮೂಲಕ ಸಾಮಾಜಿಕ ನ್ಯಾಯ ಒದಗಿಸಿ ಗ್ರಾಮೀಣ ಜನತೆಯ ಬದುಕಿನಲ್ಲಿ ಬದಲಾವಣೆಯ ಗಾಳಿ ಪ್ರಬಲವಾಗಿ ಬೀಸುವಂತೆ ಮಾಡುವುದೇ ಉದ್ದೇಶ. ಗ್ರಾಮಗಳನ್ನು ವ್ಯಸನಮುಕ್ತ, ವ್ಯಾಜ್ಯಮುಕ್ತ, ತ್ಯಾಜ್ಯಮುಕ್ತ, ಬಯಲು ಬಹಿರ್ದೆಸೆ ಮುಕ್ತ, ಗ್ರಾಮಗಳನ್ನಾಗಿ ಮಾಡುವತ್ತ ಸಾಗಬೇಕಾಗಿದೆ. ಮಹಿಳಾ ಸಬಲೀಕರಣ ಹಾಗೂ ಲಿಂಗ ಸಮಾನತೆ ಸಾಧಿಸುವಲ್ಲಿ ದೃಢ ಹೆಜ್ಜೆಗಳನ್ನು ಇಡಬೇಕಾಗಿದೆ. ಅದಕ್ಕಾಗಿ ಗ್ರಾಮ ವಿಕಾಸ ಯೋಜನೆಯ ಕಾರ್ಯಕ್ರಮಗಳನ್ನು ಜನಪರಗೊಳಿಸುವ ಮೂಲಕ ಬದ್ದತೆಯಿಂದ ಸಮರ್ಪಣ ಭಾವದಿಂದ ಸರಕಾರದ ಸಂಕಲ್ಪವನ್ನು ಕಾರ್ಯರೂಪಕ್ಕೆ ತರಬೇಕೆಂದು ಆಶಿಸುವೆ.

(ಸಿದ್ದರಾಮಯ್ಯ)



ಶ್ರೀ ಎಚ್.ಕೆ.ಪಾಟೀಲ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

# ಸಂದೇಶ

ಪ್ರಿಯ ಬಂಧುಗಳೇ,

ಹಳ್ಳಿಗಳ ಅತ್ಯಂತ ಶ್ರೇಷ್ಠ, ಶ್ರೀಮಂತ, ಸುಸಂಸ್ಕೃತ, ಸಭ್ಯ ನಾಗರೀಕತೆ ಹೊಂದಿದ್ದ ನಮ್ಮ ಗ್ರಾಮೀಣ ಪ್ರದೇಶ ಶತ ಶತಮಾನಗಳಿಂದ ನಡೆದ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ, ಧಮನಕಾರಿ, ಅಕ್ರಮಣಕಾರಿ ನೀತಿಗಳಿಂದಾಗಿ ಹಾಗೂ ಕಾರ್ಯಾಚರಣೆಗಳಿಂದಾಗಿ ತಮ್ಮ ಮೂಲ ಸತ್ವ ಕಳೆದುಕೊಂಡಿದ್ದು, ಇಂದು ನಾವು ನಮ್ಮ ಗ್ರಾಮೀಣ ಪ್ರದೇಶದ ಪುನರ್ ನಿರ್ಮಾಣದ ಜೊತೆಗೆ ನಮ್ಮ ಪ್ರಾಚೀನ ಸಭ್ಯತೆಯನ್ನು ಪುನರ್ ಸ್ಥಾಪಿಸಬೇಕಾದ ಅನಿವಾರ್ಯತೆ ಇದೆ. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಕಂಡ ಗ್ರಾಮ ಸ್ವರಾಜ್ಯದ ಕನಸಿನ ಅನುಷ್ಠಾನದಿಂದ ಮಾತ್ರ ಪೂರ್ಣ ಸ್ವರಾಜ್ಯದ ಕನಸು ನನಸಾಗಲು ಸಾಧ್ಯ.

"ಹಳ್ಳಿಗಳ ಜೀವನ ಸಂಸ್ಕೃತಿಯ ಪುನರುತ್ಥಾನವೇ ನಿಜವಾದ ಸ್ವರಾಜ್ಯ. ಭಾರತದ ಜನಜೀವಾಳ, ಕೃತಕ ನಗರ ಸಂಸ್ಕೃತಿಯಿಂದ ಎಂದೂ ಪೋಷಿತವಾಗದು. ಆದರೆ ಅಸಂಖ್ಯಾತ ಹಳ್ಳಿಗಳನ್ನು ಪಸರಿಸಿ ನಿಲ್ಲುವಂತಹ ವಿಕೇಂದ್ರೀಕೃತ, ವಿಜ್ಞಾನಾಧಾರಿತ, ಮೌಲ್ಯಾಧಾರಿತ, ವಿಶ್ವಾಸವರ್ಧಕ ಗ್ರಾಮ ಸ್ವರಾಜ್ಯದ ಸ್ಥಾಪನೆಯಿಂದ ಮಾತ್ರ ಸಾಧ್ಯ.

ನಮ್ಮ ಗ್ರಾಮಗಳನ್ನು ಸ್ವಾವಲಂಬಿ, ಸ್ವಾಭಿಮಾನಿ, ಸ್ವಚ್ಛ, ವೈಜ್ಞಾನಿಕ ದೃಷ್ಠಿಕೋನದ ಗ್ರಾಮಗಳನ್ನಾಗಿ ಮಾಡಬೇಕಾಗಿದೆ. ನಮ್ಮ ಗ್ರಾಮಗಳನ್ನು ವ್ಯಾಜ್ಯ ಮುಕ್ತ, ವ್ಯಸನಮುಕ್ತ, ತ್ಯಾಜ್ಯಮುಕ್ತ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡಬೇಕಾಗಿದೆ. ಈ ಗುರಿ ಸಾಧನೆಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೆಳಮಟ್ಟದ ಜನವಸತಿ ಹಾಗೂ ತಳಮಟ್ಟದ ಜನರ ಕಲ್ಯಾಣಕ್ಕಾಗಿ ಹತ್ತಾರು ಅಭಿವೃದ್ದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತ ಬಂದಿದ್ದರೂ ಸಮಾಧಾನವಾಗುವಂತಹ ಸ್ಥಿತಿ ನಿರ್ಮಾಣವಾಗಿಲ್ಲದಿರುವುದು ವಾಸ್ತವಿಕ ಸತ್ಯ.


ಗ್ರಾಮ ವಿಕಾಸದ ಮೂಲಕ ಚಲುವ ಕನ್ನಡನಾಡು ನಿರ್ಮಾಣ ಮಾಡುವ ಗುರಿ ಹೊಂದಿರುವ ನಮ್ಮ ಸರಕಾರ ಗ್ರಾಮಗಳ ಅಭಿವೃದ್ದಿ ಬಗ್ಗೆ ವಿಶೇಷ ಕಾಳಜಿ ಹಾಗೂ ಬದ್ಧತೆ ಹೊಂದಿದೆ. ಅದಕ್ಕಾಗಿ ಗ್ರಾಮ–ವಿಕಾಸ ಯೋಜನೆಯನ್ನು 2014–15ನೇ ಸಾಲಿನಿಂದ ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ

ಜಾರಿಗೊಳಿಸಲಾಗುತ್ತಿದೆ. ಗ್ರಾಮ ವಿಕಾಸ ಯೋಜನೆಯಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪರಿಸರ ಅಭಿವೃದ್ಧಿ, ಯುವ ಜನಾಂಗದ ಕೌಶಲ್ಯಾಬಿವೃದ್ಧಿ, ಸೌರಬೆಳಕು, ಅನಾರೋಗ್ಯಕರ ತಿಪ್ಪಿ ಮುಕ್ತ ಪರಿಸರ, ಸಾರ್ವಜನಿಕ ನೈರ್ಮಲ್ಯ, ವೈಯಕ್ತಿಕ ಹಾಗೂ ಸಮುದಾಯದ ಶೌಚಾಲಯಗಳ ನಿರ್ಮಾಣ, ಆರೋಗ್ಯ ರಕ್ಷಣೆಗಾಗಿ ಶುದ್ಧ ಕುಡಿಯುವ ನೀರು ಸೇರಿ ಅನೇಕ ಕ್ರಮಗಳು. ನಮ್ಮ ಹಳ್ಳಿ–ನಮ್ಮ ನೀರು, ನಮ್ಮ ಹಳ್ಳಿ–ನಮ್ಮ ಕೆರೆ, ನಮ್ಮ ಹೊಲ–ನಮ್ಮ ರಸ್ತೆ, ಧಾರ್ಮಿಕ ತಾಣಗಳಿಗೆ ಪುನಶ್ಚೇತನ, ಕಣ, ದನದ ದೊಡ್ಡಿ, ಕುರಿ ದೊಡ್ಡಿ, ಆಟದ ಮೈದಾನ, ಸ್ಮಶಾನ ಸೇರಿದಂತೆ 21 ಕಾರ್ಯಕ್ರಮಗಳ ಮೂಲಕ ಸಮಗ್ರ ಗ್ರಾಮೀಣ ವಿಕಾಸ ಸಾಧಿಸಲು ಸಮರ್ಪಿತವಾಗಿದೆ. ಇದೇ ಕಾಲದಲ್ಲಿ ಪಾರದರ್ಶಕ, ಸ್ವಚ್ಛ, ಪ್ರಾಮಾಣಿಕ ಹಾಗೂ ದಕ್ಷ ಆಡಳಿತಕ್ಕಾಗಿ ಗ್ರಾಮ ಪಂಚಾಯತ ಸಭೆ ನಡವಳಿಕೆಗಳ ನೇರ ಪ್ರಸಾರ ವ್ಯವಸ್ಥೆಗೊಳಿಸಬೇಕಾಗಿದೆ.

"ಗ್ರಾಮ ವಿಕಾಸ" ಅಭಿವೃದ್ಧಿಯನ್ನೊಳಗೊಂಡ ಚೇತರಿಕೆ. ಹಳ್ಳಿಯ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ. ಸಮೃದ್ಧಿ, ಸಂತೃಪ್ತಿ ಹಾಗೂ ನೆಮ್ಮದಿಯ ಬದುಕಿಗೆ ಬುನಾದಿ. ವ್ಯಕ್ತಿ ಸಮಷ್ಠಿಯ ಆಸ್ತಿಯನ್ನಾಗಿ ಮಾಡುವ ಪ್ರಕ್ರಿಯೆ. ಈ ಕೆಲಸ ಸರಕಾರಿ ಸಿಬ್ಬಂದಿಯೊಂದೇ ಪಾಲ್ಗೊಂಡರೆ ಸಾಧಿಸಲಾಗದು. ಗ್ರಾಮದ ಪ್ರತಿಯೊಬ್ಬರೂ ಗುರಿ ಸಾಧನೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವುದು ಅತ್ಯಂತ ಅವಶ್ಯಕ. ಗ್ರಾಮ ವಿಕಾಸ ಕೆಲಸದಲ್ಲಿ ಪ್ರತಿಯೊಬ್ಬರಿಗೂ ಹೊಣೆಗಾರಿಕೆ ಇದೆ. ವಾರ್ಡ ಸಭೆ, ಗ್ರಾಮ ಸಭೆಗಳನ್ನು ರಚನಾತ್ಮಕ ಚಿಂತನ ಮಂಥನದ ವೇದಿಕೆಗಳನ್ನಾಗಿ ಮಾಡಿದಾಗ ಎಲ್ಲರೂ ಒಂದಾಗಿ ಹೆಜ್ಜೆ ಹಾಕಿದಾಗ ನಾವು ಬೇಕಾದುದನ್ನು ಸಾಧಿಸಬಲ್ಲೆವು ಎಂಬುವುದರಲ್ಲಿ ನಾವೆಲ್ಲ ವಿಶ್ವಾಸ ಹೊಂದಿದವರಾಗಬೇಕು.

ಗ್ರಾಮ ಭೌಗೋಳಿಕವಾಗಿ, ಭೌತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಅಭಿವೃದ್ಧಿ ಸಾಧಿಸಬೇಕು. ಸ್ವಾಭಿಮಾನಿ, ಸ್ವಾವಲಂಬಿ, ಸಾತ್ವಿಕ, ಸಮಾಜ ನಿರ್ಮಾಣವಾದಾಗ ಗ್ರಾಮಗಳ ಬದುಕು ಹಾಗೂ ವಿಕಾಸ ನೈಜ ಅರ್ಥವನ್ನು ಕಂಡುಕೊಳ್ಳುತ್ತದೆ ಎಂದು ಬಲವಾಗಿ ನಂಬಿರುವೆ.

ಪ್ರಸಕ್ತ 2014–15ನೇ ವರ್ಷದಿಂದ ರಾಜ್ಯದ 189 ಗ್ರಾಮೀಣ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯ ಸರಕಾರಿ ಆದೇಶ ತಮಗೆ ತಲುಪಿಸಲಾಗಿದೆ. ಗ್ರಾಮ ವಿಕಾಸ ಕಾರ್ಯಾನುಷ್ಠಾನದಲ್ಲಿ ತೊಡಗಿದವರ ಅನುಕೂಲಕ್ಕಾಗಿ ವಿವರವಾದ ಮಾಹಿತಿ ಗ್ರಾಮ ವಿಕಾಸ ಮಾರ್ಗ ಸೂಚಿ ಕೈಪಿಡಿಯಲ್ಲಿ ಅಳವಡಿಸಿ ಪ್ರಕಟಿಸಲಾಗಿದೆ. ಈ ಮಾರ್ಗಸೂಚಿ ತಮಗೆಲ್ಲ ಮಾರ್ಗದರ್ಶಿಯಾಗಲಿ. ಗ್ರಾಮ ವಿಕಾಸ ಯೋಜನೆ ಯಶಸ್ವಿ ಅನುಷ್ಠಾನಕ್ಕೆ ಕೈಪಿಡಿಯಾಗಲಿ. ಗ್ರಾಮದ ಬದುಕಿನಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡುತ್ತ, ಸರ್ವೋದಯದತ್ತ ಸಾಗೋಣ ಬನ್ನಿ, ಎಲ್ಲರೂ ಒಂದಾಗಿ ಜೊತೆಗಾರರಾಗಿ ಗ್ರಾಮ ವಿಕಾಸ ಸಾಧಿಸುವತ್ತ ಸಾಗೋಣ.



(ಎಚ್.ಕೆ. ಪಾಟೀಲ)

# ಪರಿವಿಡಿ


1. ಹಿನ್ನೆಲೆ ..... 9
2. "ಗ್ರಾಮ ವಿಕಾಸ" ಯೋಜನೆ ..... 12
3. ಹೊಣೆಗಾರಿಕೆ ಮತ್ತು ಜವಾಬ್ದಾರಿಗಳು ..... 15
4. ಗ್ರಾಮ ವಿಕಾಸ ಯೋಜನೆಯಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಕ್ರಮಗಳು: ಗ್ರಾಮದ ಅನುದಾನವನ್ನು ಹಂಚಿಕೆ ಮಾಡಬೇಕಾದ ವಿವರ ..... 24
5. ಗ್ರಾಮಾಭಿವೃದ್ಧಿ ಯೋಜನೆ ತಯಾರಿಸುವಾಗ ಗ್ರಾಮ ವಿಕಾಸ ಯೋಜನೆಯೊಂದಿಗೆ ಒಗ್ಗೂಡಿಸುವ ಇತರೆ ಇಲಾಖಾ ಕಾರ್ಯಕ್ರಮಗಳು ..... 26
6. ನಿರ್ಬಂಧಿಸಿದ ಕಾಮಗಾರಿಗಳು/ಚಟುವಟಿಕೆಗಳು ..... 28
7. ಅನುದಾನ ಹಾಗೂ ಹಣ ಪಾವತಿ ..... 29
8. ಅಭಿವೃದ್ಧಿಯ ಅನುಷ್ಠಾನ ..... 31
9. ವರದಿಗಳು ಹಾಗೂ ಯಶೋಗಾಥೆಗಳು ..... 32
10. ಪ್ರಗತಿ ಪರಿಶೀಲನಾ ಸಭೆಗಳು ..... 33
11. ಮೇಲ್ವಿಚಾರಣೆ ಮತ್ತು ಉಸ್ತುವಾರಿ ..... 34
12. ಮುಖ್ಯಮಂತ್ರಿಗಳ 21 ಅಂಶ ಕಾರ್ಯಕ್ರಮಗಳ ಕಿರು ಪರಿಚಯ ..... 35

ಅನುಬಂಧ – 1 ..... 49

ಅನುಬಂಧ – 2 ..... 55

ಅನುಬಂಧ – 3 ..... 58

ಅನುಬಂಧ – 4 ..... 60

ಅನುಬಂಧ – 5 ..... 61









# ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿಯ ಹೊಸ ಪರ್ವ

ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿಯ ಹೊಸ ಪರ್ವ ಆರಂಭವಾಗಿದೆ. ರಾಜ್ಯದ ಗ್ರಾಮೀಣ ಬದುಕಿನ ನೈಜ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾರ್ಯಕ್ರಮಗಳ ತ್ವರಿತಗತಿಯ ಅನುಷ್ಠಾನದ ಮೂಲಕ ಗ್ರಾಮೀಣ ಬದುಕಿನ ಚಿತ್ರಣವೇ ಸಂಪೂರ್ಣವಾಗಿ ಬದಲಾವಣೆಗೊಳ್ಳುತ್ತಿದೆ. ಹಳ್ಳಿಗನ ಬದುಕಿಗೆ ಸಮೀಪವಿರುವ ಗ್ರಾಮೀಣ ಬದುಕಿನ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ 15 ಮತ್ತು 6 ಅಂಶಗಳ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿವೆ. ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ವ್ಯವಸ್ಥೆ ರೂಪುಗೊಳ್ಳುತ್ತಿದೆ.

ನೈರ್ಮಲ್ಯ ಮತ್ತು ಶುದ್ಧ ನೀರು ಗ್ರಾಮೀಣ ಬದುಕಿನಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ನಗರ ಪ್ರದೇಶಗಳಲ್ಲಿ ಮತ್ತು ಉಳ್ಳವರಿಗೆ ಲಭ್ಯವಿರುವ ಈ ಎರಡು ಸೌಲಭ್ಯಗಳು ಪ್ರತಿಯೊಂದು ಗ್ರಾಮದ ಕಟ್ಟಕಡೆಯ ವ್ಯಕ್ತಿಗೂ ಲಭ್ಯವಾದರೆ ಅದುವೇ ಗ್ರಾಮೀಣ ಬದಲಾವಣೆಯ ಚಿಹ್ನೆ.

# 1. ಹಿನ್ನೆಲೆ



## 1.1 ಸ್ವಚ್ಛ ಗ್ರಾಮ :

1.1.1 ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ 2000–01ರಲ್ಲಿ "ಸ್ವಚ್ಛ ಗ್ರಾಮ" ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ಸಂಪೂರ್ಣ ನೈರ್ಮಲ್ಯೀಕರಣಕ್ಕಾಗಿ ಪಂಚಸೂತ್ರವನ್ನಾಧರಿಸಿ ಗ್ರಾಮದೊಳಗಿನ ರಸ್ತೆ, ಚರಂಡಿ ಶೌಚಾಲಯ, ಶಾಲಾ ಶೌಚಾಲಯ, ಅಸ್ತ್ರ ಒಲೆ ಹಾಗೂ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವ ಅಭಿವೃದ್ಧಿ ಕಾಮಗಾರಿಗಳನ್ನೊಳಗೊಂಡ ಸಮುದಾಯ ಸಹಭಾಗಿತ್ವದ ಯೋಜನೆಯನ್ನು (ಅಂದಾಜು ವೆಚ್ಚದ 10% ಮೊತ್ತವನ್ನು ಫಲಾನುಭವಿಗಳ ವಂತಿಗೆಯೊಂದಿಗೆ ಭರಿಸುವುದು) ಜಾರಿಗೆ ತರಲಾಗಿತ್ತು.

1.1.2 ಈ ಯೋಜನೆಯಡಿಯಲ್ಲಿ ಪ್ರತಿ ಗ್ರಾಮಕ್ಕೆ ರೂ.20.00 ಲಕ್ಷಗಳ ಅಂದಾಜಿನಲ್ಲಿ ಮೊದಲನೇ ಹಂತದಲ್ಲಿ 1300 ಗ್ರಾಮಗಳು, 2ನೇ ಹಂತದಲ್ಲಿ ಪ್ರತಿ ಗ್ರಾಮಕ್ಕೆ ರೂ.10.00 ಲಕ್ಷಗಳ ಅಂದಾಜಿನಲ್ಲಿ 1000 ಗ್ರಾಮಗಳು ಮತ್ತು 3ನೇ ಹಂತದಲ್ಲಿ ಪ್ರತಿ ಗ್ರಾಮಕ್ಕೆ ರೂ.10.00 ಲಕ್ಷಗಳ ಅಂದಾಜಿನಲ್ಲಿ 500 ಗ್ರಾಮಗಳು ಒಟ್ಟಾರೆ ಈ ಕಾರ್ಯಕ್ರಮದಡಿ 2800 ಗ್ರಾಮಗಳನ್ನು ಆಯ್ಕೆ ಮಾಡಿ ರೂ.360.00 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ಯೋಜನೆಯನ್ನು ಮುಕ್ತಾಯಗೊಳಿಸಲಾಗಿದೆ.

## 1.2 ಕುಗ್ರಾಮ–ಸುಗ್ರಾಮ :

1.2.1 ವಿಶಾಲ ಕರ್ನಾಟಕವು ರಚನೆಯಾದ ನಂತರ ಸುವರ್ಣ ಕರ್ನಾಟಕ ಆಚರಣೆಯ ಪ್ರಯುಕ್ತ ಹಮ್ಮಿಕೊಳ್ಳಲಾದ ಯೋಜನೆಗಳ ಪೈಕಿ "ಕುಗ್ರಾಮ–ಸುಗ್ರಾಮ" ಯೋಜನೆಯೂ ಒಂದು. ಈ ಯೋಜನೆಯಡಿ ರಾಜ್ಯದಲ್ಲಿ ಪ್ರತಿ ತಾಲ್ಲೂಕಿನ ಅತ್ಯಂತ ಹಿಂದುಳಿದ ಗ್ರಾಮವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಗೊಳಿಸುವ ಉದ್ದೇಶವನ್ನು ಹೊಂದಲಾಗಿತ್ತು.

1.2.2 ಈ ಕಾರ್ಯಕ್ರಮದಡಿ 242 ಗ್ರಾಮಗಳನ್ನು ಆಯ್ಕೆ ಮಾಡಿ ಪ್ರತಿ ಗ್ರಾಮಕ್ಕೆ ರೂ.20.00 ಲಕ್ಷಗಳ ಅನುದಾನ ನಿಗಧಿಪಡಿಸಿ ರೂ.48.40 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಗಿದೆ.

## 1.3 ಸುವರ್ಣ ಗ್ರಾಮೋದಯ :

1.3.1 ರಾಜ್ಯವು ಸುವರ್ಣ ಮಹೋತ್ಸವದ ಆಚರಣೆಯ ಸುಸಂದರ್ಭದ ಮುಂದುವರೆದ ನೆನಪಿಗಾಗಿ ಗ್ರಾಮಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಹಿಂದಿನ ಯೋಜನೆಗಳನ್ನು ಪರಿಷ್ಕರಿಸಿ "ಸುವರ್ಣ ಗ್ರಾಮೋದಯ ಯೋಜನೆ"ಯನ್ನು 2006–07ನೇ ಸಾಲಿನಲ್ಲಿ ಆರಂಭಿಸಲಾಗಿತ್ತು. ಈ ಯೋಜನೆಯ ಅನುಷ್ಠಾನಕ್ಕಾಗಿ ಗ್ರಾಮದ ಪ್ರತಿ ವ್ಯಕ್ತಿಗೆ ರೂ.2500/– ತಲಾನುದಾನದಂತೆ 4000 ಜನಸಂಖ್ಯೆಯುಳ್ಳ ಒಂದು ಗ್ರಾಮಕ್ಕೆ ಗರಿಷ್ಠ ರೂ.1.00 ಕೋಟಿಯಂತೆ ಹಾಗೂ ಜನಸಂಖ್ಯೆಯು ಕಡಿಮೆ ಇದ್ದಾಗ ಅದಕ್ಕೆ ತಕ್ಕಂತೆ ಅನುದಾನವನ್ನು ನಿಗದಿಪಡಿಸಿದೆ.

1.3.2 ಈ ಯೋಜನೆಯಡಿ 1204 ಗ್ರಾಮಗಳಲ್ಲಿ ಮುಕ್ತಾಯಗೊಂಡಿರುವ ಮೊದಲನೇ ಹಂತವೂ ಸೇರಿ ಎಲ್ಲಾ ಐದೂ ಹಂತಗಳ ಒಟ್ಟು 5554 ಗ್ರಾಮಗಳಿಗೆ ರೂ.3434.94 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ, ಇಲ್ಲಿಯವರೆವಿಗೂ (ಮೇ–2015ರ ಅಂತ್ಯಕ್ಕೆ) ರೂ.3107.31 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಲು ಬಿಡುಗಡೆ ಮಾಡಬೇಕಾದ ಉಳಿದ ಅನುದಾನವನ್ನು ಬಿಡುಗಡೆ ಮಾಡಿ ಯೋಜನೆಯನ್ನು ಸಂಪೂರ್ಣಗೊಳಿಸಲಾಗುವುದು.

1.3.3 ಸುವರ್ಣ ಗ್ರಾಮೋದಯ ಯೋಜನೆಯ 5 ಹಂತಗಳಲ್ಲಿ ಬಹುತೇಕ ಗ್ರಾಮಗಳಲ್ಲಿ ಕಾಮಗಾರಿಗಳು ಮುಕ್ತಾಯಗೊಂಡು ಮುಂದಿನ ಆರ್ಥಿಕ ವರ್ಷ 2015–16ರಲ್ಲಿ ಯೋಜನೆಯು ಬಹುತೇಕ ಮುಕ್ತಾಯಗೊಳ್ಳುತ್ತದೆ.

## 1.4 ಹಿಂದಿನ ಯೋಜನೆಗಳ ಅನುಭವ :

1.4.1 ಹಿಂದಿನ ಯೋಜನೆಗಳ ಅನುಷ್ಠಾನದ ಅನುಭವಗಳನ್ನು ಅವಲೋಕಿಸಿದಾಗ ಯೋಜನೆಗೆ ನಿಗದಿಪಡಿಸಿದ ಗ್ರಾಮಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಇದರಿಂದ ಒಂದು ಗ್ರಾಮಕ್ಕೆ ನಿಗದಿಪಡಿಸಿದ ಅನುದಾನವನ್ನು 2 ಅಥವ 3 ಗ್ರಾಮಗಳಿಗೆ ಹಂಚಿಕೆ ಮಾಡಿರುವುದರಿಂದ ಅನುದಾನವು ಅಭಿವೃದ್ಧಿಗೆ ನಿರೀಕ್ಷಿತ ಪ್ರಮಾಣದಲ್ಲಿ ದೊರೆಯದಿರುವುದನ್ನು ಗುರುತಿಸಬಹುದಾಗಿದೆ.

1.4.2 ಇದರಿಂದ ಅನುದಾನ ಕೊರತೆಯಾಗಿ ಉದ್ದೇಶಿಸಿದ್ದ ರೀತಿಯಲ್ಲಿ ಗ್ರಾಮಗಳು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾಗಿರುವುದಿಲ್ಲ. ಅಲ್ಲದೆ ಸುವರ್ಣ ಗ್ರಾಮೋದಯ ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯತ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿದ್ದಲ್ಲಿ ಇನ್ನಷ್ಟು ಪರಿಣಾಮಕಾರಿ ಬದಲಾವಣೆಯನ್ನು ನಿರೀಕ್ಷಿಸಬಹುದಾಗಿತ್ತು.

1.4.3 ಈ ಅಭಿಪ್ರಾಯಗಳನ್ನು ಹಿರಿಯ ಅಧಿಕಾರಿಗಳ ಕ್ಷೇತ್ರ ಭೇಟಿಯಿಂದ, ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸ್ಥರದ ಅಧಿಕಾರಿಗಳ ಅನುಭವಗಳಿಂದ, ಸ್ಥಳೀಯ ಜನಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರಗೊಂಡ ವರದಿಗಳ ಅಭಿಪ್ರಾಯದಿಂದ ಮತ್ತು ಇತ್ತೀಚೆಗೆ ಯೋಜನೆಯ ಕುರಿತು ಲೆಕ್ಕಪರಿಶೋಧನೆ ಕೈಗೊಂಡ ಮಹಾಲೇಖಪಾಲರ ಕಾರ್ಯಾಲಯದ ಅಧಿಕಾರಿಗಳು ನೀಡಿದ ಹಲವಾರು ಆಕ್ಷೇಪಣಾ ಕಂಡಿಕೆಗಳಿಂದ ಗ್ರಹಿಸಲಾಗಿರುತ್ತದೆ.

**ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮಗಳ ಸಮಗ್ರ ಅಭಿವೃದ್ಧಿ, ಪ್ರತಿ ಹಳ್ಳಿಗನ ಜೀವನ ಮಟ್ಟದಲ್ಲಿ ಬದಲಾವಣೆ ತಂದು ಗ್ರಾಮಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸುವ ದಿಶೆಯಲ್ಲಿ ಸರ್ಕಾರವು "ಗ್ರಾಮ ವಿಕಾಸ" ಯೋಜನೆಯನ್ನು ರೂಪಿಸಲಾಗಿದೆ.**



# 2. “ಗ್ರಾಮ ವಿಕಾಸ” ಯೋಜನೆ




## 2.1 ಯೋಜನೆ :

2.1.1 ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2014–15ನೇ ಸಾಲಿನ ಆಯವ್ಯಯದಲ್ಲಿ “ಗ್ರಾಮ ವಿಕಾಸ” ಯೋಜನೆಯನ್ನು ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಪ್ರಾರಂಭಿಸಲು ಘೋಷಿಸಲಾಗಿದೆ. ಅದರಂತೆ “ಗ್ರಾಮ ವಿಕಾಸ” ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮಗಳು ಸೇರಿ ಒಟ್ಟು 5 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಸಾಧಿಸಲು 3 ವರ್ಷದ ಯೋಜನೆಯನ್ನು ಜಾರಿಗೆ ತರಲಾಗಿದೆ.

2.1.2 2011ರ ಜನಸಂಖ್ಯೆಯನ್ನು ಆಧರಿಸಿ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಗರಿಷ್ಠ 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗ್ರಾಮದ ಅಭಿವೃದ್ಧಿಗೆ ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಒಟ್ಟು 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಟ ರೂ.3.75 ಕೋಟಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ವಿಶೇಷ ಸಂದರ್ಭದಲ್ಲಿ ನಿಗದಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಠ 5 ಗ್ರಾಮ ಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲೂ ಸಹ ಅನುದಾನವನ್ನು 5000 ಜನಸಂಖ್ಯೆಗೆ ಮಿತಿಗೊಳಿಸಿ ರೂ.3.75 ಕೋಟಿಗಳನ್ನು ಹಂಚಿಕೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಅನುದಾನವನ್ನು ಹೆಚ್ಚಿಗೆ ಹಂಚಿಕೆ ಮಾಡಲಾಗುವುದಿಲ್ಲ.

2.1.3 ರಾಜ್ಯದ ಯಾವ ಮತಕ್ಷೇತ್ರವು ಒಂದಕ್ಕಿಂತ ಹೆಚ್ಚಿನ ತಾಲ್ಲೂಕನ್ನು ಹೊಂದಿದ್ದಲ್ಲಿ ಅದಕ್ಕನುಗುಣವಾಗಿ ಗ್ರಾಮಗಳ ಸಂಖ್ಯೆಯನ್ನು ಆ ಗ್ರಾಮೀಣ ಮತಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಂತೆ ಸರ್ಕಾರವು ತಾಲ್ಲೂಕುವಾರು ನಿಗದಿಪಡಿಸಿದಂತೆ ಗ್ರಾಮಗಳನ್ನು ಆಯ್ಕೆ ಮಾಡುವುದು. ಇದಕ್ಕೆ ಸಂಬಂಧಿಸಿದ ಸಂಪೂರ್ಣ ವಿವರಗಳಿಗಾಗಿ ಸರ್ಕಾರಿ ಆದೇಶ ಹಾಗೂ ಅದಕ್ಕೆ ಲಗತ್ತಿಸಿರುವ ಅನುಬಂಧಗಳನ್ನು ಕಡ್ಡಾಯವಾಗಿ ನೋಡುವುದು ಮತ್ತು ಅನುಸರಿಸುವುದು. ವಿಶೇಷ ಸಂದರ್ಭದಲ್ಲಿ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ ಗರಿಷ್ಠ 5 (ಎಸ್‌ಸಿ, ಎಸ್‌ಟಿ ಜನಸಂಖ್ಯೆ ಹೆಚ್ಚು ಇರುವ ಎರಡು ಗ್ರಾಮಗಳೂ ಸೇರಿದಂತೆ) ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ.

2.1.4 ಇದಕ್ಕಾಗಿ ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 1000 ಗ್ರಾಮಗಳಲ್ಲಿ ಒಟ್ಟು ರೂ.750.00 ಕೋಟಿಗಳ ಅಂದಾಜಿನಲ್ಲಿ ಗ್ರಾಮ ವಿಕಾಸ ಯೋಜನೆಯ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ.

## 2.2 ಯೋಜನೆಯ ಉದ್ದೇಶಗಳು :

2.2.1 ಗ್ರಾಮೀಣ ಪ್ರದೇಶದ ಕಟ್ಟಕಡೆಯ ವ್ಯಕ್ತಿಗೂ ಶುದ್ಧ ಕುಡಿಯುವ ನೀರು ದೊರೆಯುವಂತಾಗಲು ಅಗತ್ಯ ಕ್ರಮ ಕೈಗೊಳ್ಳುವುದು.

2.2.2 ಹಳ್ಳಿಗಳ ಸ್ವಚ್ಛತೆ, ನೈರ್ಮಲ್ಯಗಳಿಗೆ ಹೆಚ್ಚು ಒತ್ತನ್ನು ನೀಡಿ, ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಪರಿವರ್ತಿಸಿ, ಆರೋಗ್ಯವಂತ, ಸುಸ್ಥಿರ ಹಾಗೂ ಗ್ರಾಮ ಸಮುದಾಯವನ್ನು ಬಲಿಷ್ಠಗೊಳಿಸುವುದು.

2.2.3 ಆಯ್ಕೆಯಾದ ಗ್ರಾಮಗಳ ಉತ್ತಮ ಭೌತಿಕ ಪರಿಸರವನ್ನು ನಿರ್ಮಿಸಿ ಗ್ರಾಮ ಸೌಂದರ್ಯೀಕರಣ ಮಾಡುವುದು ಹಾಗೂ ಅವಶ್ಯಕ ಗ್ರಾಮೀಣ ಮೂಲ ಸೌಕರ್ಯಗಳನ್ನು ಒದಗಿಸುವುದು.

2.2.4 ಸ್ವಾಭಿಮಾನಿ ಹಾಗೂ ಸ್ವಾವಲಂಬೀ ದೃಷ್ಠಿಕೋನ ಹೊಂದಿರುವ ಗ್ರಾಮ ಸಮುದಾಯವನ್ನು ಸದೃಢ ಗೊಳಿಸಲು ವ್ಯಾಜ್ಯಮುಕ್ತ, ತ್ಯಾಜ್ಯಮುಕ್ತ, ವ್ಯಸನಮುಕ್ತ, ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳ ನಿರ್ಮಾಣ ಮಾಡುವುದು.

2.2.5 ತಳ ಮಟ್ಟದ ಸಮುದಾಯಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಗತ್ಯತೆ ಆಧರಿಸಿ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ತಯಾರಿಸಿ ಸಮಸಮಾಜದ ನಿರ್ಮಾಣಕ್ಕೆ ಆದ್ಯತೆ ನೀಡುವುದು.

2.2.6 ಗ್ರಾಮೀಣ ನಿರುದ್ಯೋಗಿ ಯುವಜನರಿಗೆ ಉದ್ಯೋಗ ಸೃಜಿಸಲು, ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಕಲ್ಪಿಸಿ, ಕೃಷಿಯೇತರ ಉದ್ಯೋಗಾವಕಾಶಗಳನ್ನು ಒದಗಿಸಲು ಆದ್ಯತೆ ನೀಡುವುದು.

2.2.7 ಅಗತ್ಯ ಗ್ರಾಮೀಣ ಮೂಲಭೂತ ಸೌಕರ್ಯಗಳೊಂದಿಗೆ ಗ್ರಾಮೀಣ ಬದುಕನ್ನು ಹಸನುಗೊಳಿಸಿ ಗ್ರಾಮಗಳ ಪುರ್ನನಿರ್ಮಾಣಗೊಳಿಸುವುದು.

## 2.3 ಅಭಿವೃದ್ಧಿಯ ಕಾರ್ಯತಂತ್ರ :

2.3.1 ಗ್ರಾಮ ವಿಕಾಸ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿಕೇಂದ್ರೀಕರಣ ತತ್ವದಡಿ ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಸಿದ್ಧಪಡಿಸಿ ಗ್ರಾಮ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುವುದು. ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಸಂಪನ್ಮೂಲಗಳು, ಸಿಬ್ಬಂದಿ ಮತ್ತು ಪ್ರಕ್ರಿಯೆಗಳನ್ನು ಉಪಯೋಗಿಸುವುದು ಮತ್ತು ಆಯ್ಕೆಯಾದ ಗ್ರಾಮಗಳ ಅವಶ್ಯಕತೆಗಳನ್ನು ಅಂತಹ ಕಾರ್ಯಕ್ರಮಗಳ ಮಾನದಂಡಗಳ ಚೌಕಟ್ಟಿನಲ್ಲಿ ಸಂಪೂರ್ಣವಾಗಿ ಈಡೇರಿಸುವುದು.

2.3.2 ಗ್ರಾಮ ವಿಕಾಸ ಯೋಜನೆಯಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಒಗ್ಗೂಡಿಸುವ ಮೂಲಕ ಆಯ್ಕೆಯಾದ ಗ್ರಾಮಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದು.

2.3.3 ಗ್ರಾಮದ ನಿರ್ದಿಷ್ಟ ಅಭಿವೃದ್ಧಿಯ ಅವಶ್ಯಕತೆಗಳನ್ನು ಈಡೇರಿಸಲು ಹೆಚ್ಚುವರಿ/ಪೂರಕವಾದ ವಿವಿಧ ಕಾರ್ಯಕ್ರಮಗಳನ್ನು ಏಕೀಕರಣಗೊಳಿಸಲಾಗುವುದು. ಯೋಜನೆಯ ವಿವಿಧ ಅಂಶಗಳನ್ನು ಅನುಷ್ಠಾನಗೊಳಿಸಲು ಗ್ರಾಮ ಸಮುದಾಯದ ಜೊತೆಗೆ ಸರ್ಕಾರದ ವಿವಿಧ ಯೊಜನೆಗಳು, ಸರ್ಕಾರೇತರ ಸಂಘಗಳು, ಸಮುದಾಯ ಆಧಾರಿತ ಸಂಸ್ಥೆಗಳು ಸಹಕಾರಿ ಸಂಸ್ಥೆಗಳು ಹಾಗೂ ಖಾಸಗಿ ವಲಯದ ಭಾಗೀದಾರರು ಮುಂತಾದವುಗಳ ಸೇವೆಗಳನ್ನು ಉಪಯೋಗಿಸಿಕೊಳ್ಳುವುದು.

## 2.4 ಗ್ರಾಮಗಳ ಆಯ್ಕೆ :

2.4.1 ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ ಗರಿಷ್ಠ ಜನ ಸಂಖ್ಯೆಯನ್ನು ಆಧರಿಸಿ ಗರಿಷ್ಠ ಗ್ರಾಮಗಳನ್ನು ಸ್ಥಳೀಯ ಶಾಸಕರು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಿ ಅವರುಗಳಿಂದ ಆ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆಯುವುದು.

2.4.2 ಶಾಸಕರು ಆಯ್ಕೆ ಮಾಡಿ ನೀಡಿದ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವುದು.

# ೩. ಹೊಣೆಗಾರಿಕೆ ಮತ್ತು ಜವಾಬ್ಧಾರಿಗಳು



## 3.1 ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು :

3.1.1 ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡುವುದು. ವಿಶೇಷ ಸಂದರ್ಭದಲ್ಲಿ ನಿಗದಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ, 5000 ಜನಸಂಖ್ಯೆಯನ್ನು ಮೀರಿದ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡುವಾಗಲೂ ಸಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ಹೆಚ್ಚು ವಾಸಿಸುವ ಕನಿಷ್ಟ 2 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು.

3.1.2 ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಗಳಿಂದಾಗಿ 5 ಕ್ಕಿಂತ ಕಡಿಮೆ ಇರುವ ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯುಳ್ಳ ಗ್ರಾಮಗಳನ್ನು ಆಯ್ಕೆ ಮಾಡುವುದು.

3.1.3 ಆಯ್ಕೆ ಮಾಡುವ ಗ್ರಾಮಗಳು ಈ ಹಿಂದೆ ಯಾವುದೇ ಯೋಜನೆಯಲ್ಲಿ ಆಯ್ಕೆಯಾಗಿರಬಾರದು. ಉದಾ : ಸುವರ್ಣ ಗ್ರಾಮೋದಯ, ಕುಗ್ರಾಮ – ಸುಗ್ರಾಮ, ಸ್ವಚ್ಛ ಗ್ರಾಮ ಇತ್ಯಾದಿ.,

3.1.4 ಐದು ಗ್ರಾಮಗಳಿಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಬಾರದು. ನಿಗಧಿಪಡಿಸಿದ 5000 ಜನಸಂಖ್ಯೆಯುಳ್ಳ ಗ್ರಾಮಗಳಿಗಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಒಂದೇ ಗ್ರಾಮವನ್ನು ಆಯ್ಕೆ ಮಾಡಿದಾಗ ಗ್ರಾಮೀಣ ಮತಕ್ಷೇತ್ರಕ್ಕೆ ನಿಗಧಿಪಡಿಸಿದ ರೂ.3.75 ಕೋಟಿಗಳ ಅನುದಾನವನ್ನು ಮಾತ್ರ ನೀಡಲಾಗುವುದು. ಇದಕ್ಕಾಗಿ ಹೆಚ್ಚಿನ ಅನುದಾನವನ್ನು ನೀಡಲಾಗುವುದಿಲ್ಲ.

3.1.5 ಸಂಪೂರ್ಣ 2 ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿದ ಗರಿಷ್ಠ 8000 ಜನಸಂಖ್ಯೆಯುಳ್ಳ ಗರಿಷ್ಠ 8 ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಎಸ್‌ಸಿ ಮತ್ತು ಎಸ್‌ಟಿ ಜನಸಾಂದ್ರತೆಯುಳ್ಳ ಕನಿಷ್ಠ 3 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು. ಗರಿಷ್ಠ 8000 ಜನ ಸಂಖ್ಯೆಯನ್ನು ಮೀರಿದ 8 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವನ್ನು ರೂ. 6.00 ಕೋಟಿಗೆ ಸೀಮಿತಗೊಳಿಸಲಾಗುವುದು.

3.1.6 ಗ್ರಾಮದ ಅಭಿವೃದ್ಧಿಗಾಗಿ ಆದ್ಯತೆಯನ್ನಾಧರಿಸಿ ಗ್ರಾಮಾಭಿವೃದ್ಧಿ ಯೋಜನೆ ತಯಾರಿಸಲು ಗ್ರಾಮ ಪಂಚಾಯತ್‌ಗಳಿಗೆ ಸಲಹೆ, ಮಾರ್ಗದರ್ಶನಗಳನ್ನು ನೀಡುವುದು. ಅಲ್ಲದೆ, ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಗ್ರಾಮ ಸಮುದಾಯವು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಪ್ರೇರೇಪಿಸುವುದು ಹಾಗೂ ಭಾಗವಹಿಸುವುದು.

3.1.7 ಅಭಿವೃದ್ಧಿಯ ಅನುಷ್ಠಾನದಲ್ಲಿ ಉತ್ತಮ ಪರಿಣಾಮಕಾರಿ ಫಲಿತಾಂಶವನ್ನು ಪಡೆಯುವ ಸಲುವಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಪರಾಮರ್ಶೆಗಾಗಿ ಗ್ರಾಮದಲ್ಲಿ ಕಾಲಕಾಲಕ್ಕೆ ಸಭೆಗಳನ್ನು ಏರ್ಪಡಿಸಲು ಪಂಚಾಯತ್‌ಗಳಿಗೆ ಸೂಚಿಸುವುದು ಮತ್ತು ಪಾಲ್ಗೊಳ್ಳುವುದು.

3.1.8 ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊರತೆಯಾಗಬಹುದಾದ ಅನುದಾನವನ್ನು ತಮ್ಮ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ನೀಡುವುದು, ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ಖಾಸಗಿ ನಿಗಮಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು.

3.1.9 ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು.



## 3.2 ಗ್ರಾಮ ಪಂಚಾಯತ್ :

ಯೋಜನೆಗಳನ್ನು ತಯಾರಿಸುವ ಮತ್ತು ಅನುಮೋದಿಸುವ ವಿವಿಧ ಹಂತಗಳಲ್ಲಿ ತೆಗೆದುಕೊಳ್ಳಬಹುದಾದ ಪ್ರಕ್ರಿಯೆಗಳಲ್ಲಿ ಗ್ರಾಮ ಪಂಚಾಯಿತಿಯು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಗ್ರಾಮಗಳ ಆಯ್ಕೆ ಪಟ್ಟಿಗೆ ಅನುಮೋದನೆ ಪಡೆದ ನಂತರ ಪಂಚಾಯತ್‌ಗಳು ಆಯ್ಕೆಯಾದ ಗ್ರಾಮದಲ್ಲಿನ ವಸ್ತು ಸ್ಥಿತಿಯನ್ನು ಜನರ ಸಹಭಾಗಿತ್ವದಲ್ಲಿ ಸಾಧ್ಯವಿದ್ದಲ್ಲಿ ಸರ್ಕಾರೇತರ ಅನುಭವವಿರುವ ಸ್ವಯಂ ಸೇವಾ ಸಂಸ್ಥೆಯ ಸೇವೆಯನ್ನು ಪಡೆದು ಗ್ರಾಮದಲ್ಲಿ ಹಾಲಿ ಇರುವ ಮೂಲ ಸೌಕರ್ಯಗಳ ಪಟ್ಟಿಯನ್ನು ತಯಾರಿಸಲು ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವುದು.

ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯ ವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು.

### 3.2.1 ವಾರ್ಡ್ ಸಭೆ:

1. ಕರಡು ಕ್ರಿಯಾ ಯೋಜನೆ ತಯಾರಿಸುವ ಪೂರ್ವದಲ್ಲಿ ಕಡ್ಡಾಯವಾಗಿ ವಾರ್ಡ್ ಸಭೆಗಳನ್ನು ನಡೆಸಿ ಜನರ ಬೇಡಿಕೆಗಳನ್ನು ಹಾಗೂ ಆಶಯಗಳನ್ನು ಕ್ರೋಢೀಕರಿಸಿ ಆದ್ಯತಾ ಪಟ್ಟಿ ತಯಾರಿಸುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನರ ಅಭಿವೃದ್ಧಿಗೆ ಕಾಲೋನಿಗಳಲ್ಲೇ ಸಭೆ ನಡೆಸಿ ಆದ್ಯತಾ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸುವುದು.

### 3.2.2 ಗ್ರಾಮ ಸಭೆ :

1. ಗ್ರಾಮ ವಿಕಾಸ ಯೋಜನೆಯ ಅಭಿವೃದ್ಧಿಗೆ ಸರ್ಕಾರವು ಹೊರಡಿಸುವ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಸಭೆಯಲ್ಲಿ ಓದುವುದು.

2. ಗ್ರಾಮ ಪಂಚಾಯಿತಿಯು ಗ್ರಾಮ ವಿಕಾಸ ಯೋಜನೆಯ ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸುವ ಮುನ್ನ ವಾರ್ಡ್ ಸಭೆಗಳಿಂದ ಬಂದಂತಹ ಆದ್ಯತಾ ಪಟ್ಟಿಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸುವುದು ಮತ್ತು ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸುವುದು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರದೇಶಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ಕುರಿತಂತೆ ಬಂದಂತಹ ಶಿಫಾರಸ್ಸುಗಳನ್ನು ಸಹ ಗ್ರಾಮ ಸಭೆಯಲ್ಲಿ ಮಂಡಿಸುವುದು ಮತ್ತು ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸುವುದು.

4. ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾಮಗಾರಿ / ಚಟುವಟಿಕೆಗಳು ಇನ್ನೊಂದು ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಅಥವಾ ಅನುಷ್ಠಾನ ಮಾಡಲು ಆಯ್ಕೆಯಾಗಿರುವ ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡಬಾರದು.

5. ಗ್ರಾಮದಲ್ಲಿ ದೊರೆಯಬಹುದಾದ ದೇಣಿಗೆ ಮೊತ್ತ ಮತ್ತು ಭೌತಿಕ ಸಂಪನ್ಮೂಲಗಳ ಕುರಿತು ಗ್ರಾಮ ಸಭೆಯಲ್ಲಿ ಚರ್ಚಿಸುವುದು. ದೊರೆಯಬಹುದಾದ ಸಂಪನ್ಮೂಲಗಳನ್ನು ಕುರಿತಂತೆ ಪ್ರತ್ಯೇಕ ಪಟ್ಟಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.

### 3.2.3 ಗ್ರಾಮ ಪಂಚಾಯತ್

ಗ್ರಾಮ ಸಭೆಯಲ್ಲಿ ಬಂದಂತಹ ಶಿಫಾರಸ್ಸುಗಳನ್ನು ಆಧರಿಸಿ ಯೋಜನೆಯಲ್ಲಿ ಅವಕಾಶ ಕಲ್ಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸಿ ಗ್ರಾಮಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು. ಯೋಜನೆಯನ್ನು ತಯಾರಿಸುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರದೇಶಗಳಲ್ಲಿ ಅಗತ್ಯವಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನೂ ಸಹ ಪ್ರತ್ಯೇಕವಾಗಿ ತಯಾರಿಸಿಕೊಳ್ಳುವುದು.

ಗ್ರಾಮದ ಅಭಿವೃದ್ಧಿಗೆ ಪೂರಕವಾಗಿ ದೊರೆಯಬಹುದಾದ ಆರ್ಥಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಸಹ ಗಣನೆಗೆ ತೆಗೆದುಕೊಳ್ಳುವುದು. ಗ್ರಾಮದ ಅಭಿವೃದ್ಧಿಗೆ ಆರ್ಥಿಕ ನೆರವನ್ನು ನೀಡುವಂತಹ ವ್ಯಕ್ತಿ ಅಥವಾ ಸಂಸ್ಥೆಗಳನ್ನೂ ಸಹ ಪಟ್ಟಿ ಮಾಡಿ ದೊರೆಯಬಹುದಾದ ಆರ್ಥಿಕ ಸಹಾಯದ ಮೊತ್ತವನ್ನು ಚೆಕ್ ಮೂಲಕ ಪಡೆಯುವುದು.

ಭೌತಿಕ ಸಂಪನ್ಮೂಲಗಳ ಪೈಕಿ ಕಟ್ಟಡಗಳ ಅವಶ್ಯಕತೆ ಇದ್ದು ನಿರ್ಮಾಣಕ್ಕೆ ಸರ್ಕಾರಿ ಜಾಗವು ಲಭ್ಯವಿಲ್ಲದೆ ಇದ್ದಾಗ ನಿವೇಶನ ಅಥವಾ ಜಮೀನುಗಳನ್ನು ದಾನವಾಗಿ ನೀಡಬಹುದಾದ ದಾನಿಗಳ ಪಟ್ಟಿಯನ್ನೂ ಸಹ ಮಾಡಿಕೊಳ್ಳುವುದು. ದಾನ ನೀಡಬಹುದಾದ ಸಂದರ್ಭದಲ್ಲಿ ಮೊದಲಿಗೆ ಪಂಚಾಯತ್ ಹೆಸರಿಗೆ ನೊಂದಾಯಿಸುವ ಕ್ರಮವನ್ನು ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ.

1. ಗ್ರಾಮ ಪಂಚಾಯಿತಿಯು ದೊರೆಯಬಹುದಾದ ಗ್ರಾಮ ವಿಕಾಸದ ಅನುದಾನ ಮತ್ತು ಇತರೆ ಮೂಲಗಳಿಂದ ದೊರೆಯಬಹುದಾದ ಆರ್ಥಿಕ ದೇಣಿಗೆ, ಭೌತಿಕ ಸಂಪನ್ಮೂಲಗಳು ಹಾಗೂ ಒಗ್ಗೂಡಿಸುವಿಕೆಯ (convergence) ಮೂಲಕ ಕೈಗೊಳ್ಳಬಹುದಾದ ಕಾರ್ಯಕ್ರಮಗಳು / ಕಾಮಗಾರಿಗಳು ಮತ್ತು ಅವುಗಳಲ್ಲಿ ಲಭ್ಯವಾಗುವ ಅನುದಾನಗಳು ಎಲ್ಲವನ್ನು ಕ್ರೋಢೀಕರಿಸಿ ಅಂತಿಮವಾಗಿ Plan Plus ತಂತ್ರಾಂಶದಲ್ಲಿ ಅಥವಾ ಗ್ರಾಮ ವಿಕಾಸ ತಂತ್ರಾಂಶದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಅನುಮೋದನೆ ನೀಡುವುದು.

   ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗದವರು ವಾಸಿಸುವ ಪ್ರದೇಶದ ಅಭಿವೃದ್ಧಿಗೆಪ್ರತ್ಯೇಕ ಗ್ರಾಮಾಭಿವೃದ್ಧಿ ಯೋಜನೆಯನ್ನು ನಿಗಧಿಪಡಿಸಿದ ಅನುದಾನದಲ್ಲಿ ತಯಾರಿಸುವುದು ಮತ್ತು ಅನುಮೋದನೆ ನೀಡುವುದು.

2. ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡಿ ಗುಣಾತ್ಮಕವಾಗಿ ಕಾಮಗಾರಿಗಳು ಅನುಷ್ಠಾನವಾಗುವಂತೆ ನೋಡಿಕೊಳ್ಳುವುದು.

3. ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣವನ್ನು ನೀಡುವುದು.

4. ಸ್ವಾವಲಂಬಿ, ಸ್ವಾಸ್ತ್ಯ ಗ್ರಾಮದ ಕಲ್ಪನೆಯ ಸಾಕಾರಕ್ಕಾಗಿ ಶ್ರಮದಾನ, ಆರೋಗ್ಯ ಶಿಬಿರ, ಕರ ವಸೂಲಿ, ಸಾಲ ವಸೂಲಿ, ವ್ಯಾಜ್ಯ ಪರಿಹಾರ ಕಾರ್ಯಕ್ರಮಗಳನ್ನೂ ಸಹ ಕಡ್ಡಾಯವಾಗಿ ಹಮ್ಮಿಕೊಳ್ಳುವುದು. ಇದಕ್ಕಾಗಿ ದಿನಾಂಕಗಳನ್ನು ನಿಗದಿಪಡಿಸಿ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ಮಾಡುವುದು.

5. ಆಯ್ಕೆಯಾದ ಗ್ರಾಮವನ್ನು ಯೋಜನೆ ಪ್ರಾರಂಭವಾದ ಒಂದು ವರ್ಷಗಳೊಳಗೆ ಸಂಪೂರ್ಣವಾಗಿ ಬಯಲು ಬಹಿರ್ದೆಶೆ ಮುಕ್ತ ಗ್ರಾಮವನ್ನಾಗಿಮಾಡುವುದು.

6. ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಸರ್ಕಾರದ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಮಹಿಳಾ ಸಂಘಗಳನ್ನು ತೊಡಗಿಸಿಕೊಳ್ಳುವುದು.

7. ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊರತೆಯಾಗಬಹುದಾದ ಅನುದಾನವನ್ನು ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು.

8. ಕಾಮಗಾರಿಗಳ ಹಣ ಪಾವತಿಸುವ ಮುನ್ನ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳನ್ನು "ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ"ದಿಂದ ಪಡೆದ Payment Advise ಆಧಾರದ ಮೇಲೆ ಮಾತ್ರ ಹಣ ಪಾವತಿಸುವುದು.

9. ಯೋಜನೆಯು ಅನುಷ್ಠಾನಗೊಂಡ ನಂತರ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಕಡ್ಡಾಯವಾಗಿ ಅವಕಾಶ ಕಲ್ಪಿಸುವುದು.

10. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮದ ಪ್ರಸ್ತುತ ಚಿತ್ರಣವನ್ನು ವರದಿ ಹಾಗೂ ಫೋಟೋ ಹಾಗೂ ಸಾಕ್ಷ್ಯ ಚಿತ್ರ ಸಮೇತ ದಾಖಲೀಕರಣ ಮಾಡಿಕೊಳ್ಳುವುದು ಹಾಗೂ ಯೋಜನೆಯು ಪೂರ್ಣಗೊಂಡ ನಂತರ ಗ್ರಾಮವು ಅಭಿವೃದ್ಧಿ ಹೊಂದಿದ ಚಿತ್ರಣವನ್ನು ಫೋಟೋ ಹಾಗೂ ಸಾಕ್ಷ್ಯ ಚಿತ್ರ ಸಮೇತ ದಾಖಲೀಕರಣ ಮಾಡಿ ವರದಿ ಮಾಡುವುದು.

11. ಗ್ರಾಮ ಸಭೆಯ ಸಂಪೂರ್ಣ ವೀಡಿಯೋ ಚಿತ್ರೀಕರಣ ಮಾಡುವುದು ಮತ್ತು ಸಭೆಯ ಮೊದಲಿಗೆ ನಡವಳಿಯ ವಹಿಯಲ್ಲಿ ಸಹಿ ಪಡೆಯುವುದು.

12. ತಾಂತ್ರಿಕ ಅನುಮೋದನೆಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೆ ಒಳಪಟ್ಟಿರುತ್ತದೆ.

## 3.3 ಅನುಷ್ಠಾನ ಸಂಸ್ಥೆ /ಅಧಿಕಾರಿಗಳು :

1. ಗ್ರಾಮ ಪಂಚಾಯತ್‌ಗಳು ಆಯ್ಕೆ ಮಾಡಿದ ಅನುಷ್ಠಾನ ಸಂಸ್ಥೆಯು ಪಾರದರ್ಶಕವಾಗಿ KTPP ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸಿ ಗುತ್ತಿಗೆದಾರರನ್ನು ನೇಮಿಸುವುದು.

2. ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿಗಾಗಿ ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಮಾಡಲು ಕ್ರಮ ಕೈಗೊಳ್ಳುವುದು. ಸಭೆಯಲ್ಲಿ ನಿರ್ಣಯ ಮಾಡಿದಂತೆ ಅನುಸರಣಾ ಕ್ರಮ ಕೈಗೊಂಡು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು.

3. ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಕ್ಕೆ ತರುವುದು.

4. ಕಾಮಗಾರಿಗಳ ಪ್ರತಿ ಹಂತದ ಪ್ರಗತಿಯನ್ನು ಗಾಂಧಿ ಸಾಕ್ಷಿ ಕಾಯಕ / ಪಂಚತಂತ್ರ ತಂತ್ರಾಂಶಗಳಲ್ಲಿ ತಪ್ಪದೇ ಅಳವಡಿಸುವುದು.

5. ಕಾಮಗಾರಿಗಳನ್ನು ಆರಂಭಿಸುವ ಮುನ್ನ ಯಾವುದೇ ಕಾಮಗಾರಿಯು ಇನ್ನೊಂದು ಯೋಜನೆಯಲ್ಲಿ ಅನುಷ್ಠಾನಗೊಂಡಿರಬಾರದು ಮತ್ತು ಹಣ ಪಾವತಿಯಾಗಿರಬಾರದು ಮತ್ತು ಇನ್ನೊಂದು ಯೋಜನೆಯಲ್ಲಿ ಹಣ ಪಾವತಿಗಾಗಿ ಬಾಕಿ ಇರುವವಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಾರದು.

## 3.4 ಯೋಜನಾ ಉಸ್ತುವಾರಿ ಸಮಿತಿ :

ಅಭಿವೃದ್ಧಿ ಕಾರ್ಯಗಳ ಪರಿವೀಕ್ಷಣೆಗೆ ಆಯ್ಕೆಯಾದ ಗ್ರಾಮಗಳ ಗ್ರಾಮ ಪಂಚಾಯತ್‌ಗಳಲ್ಲಿ ಯೋಜನಾ ಉಸ್ತುವಾರಿ ಸಮಿತಿಯನ್ನು ಈ ಕೆಳಕಂಡಂತೆ ರಚಿಸುವುದು.

| | | | |
|---|---|---|---|
| 1. | ಮಾನ್ಯ ಶಾಸಕರು | – | ಅಧ್ಯಕ್ಷರು |
| 2. | ಗ್ರಾಮ ಪಂಚಾಯತ್ ಅಧ್ಯಕ್ಷರು | – | ಸಹ ಅಧ್ಯಕ್ಷರು |
| 3. | ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ | – | ಸದಸ್ಯರು |
| 4. | ಕಾರ್ಯನಿರ್ವಾಹಕ ಅಧಿಕಾರಿ | – | ಸದಸ್ಯರು |
| 5. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ) | – | ಸದಸ್ಯರು |
| 6. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ) | – | ಸದಸ್ಯರು |
| 7. | ಪಂಚಾಯತ್ ಅಭಿವೃದ್ಧಿ ಅಧಿಕಾರಿ | – | ಸದಸ್ಯ ಕಾರ್ಯದರ್ಶಿ |

## 3.5 ತಾಲ್ಲೂಕು ಪಂಚಾಯತ್:

1. ಗ್ರಾಮ ಪಂಚಾಯತ್‌ಗಳು ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸಲು ಗ್ರಾಮ ಸಭೆಗಳನ್ನು ಏರ್ಪಡಿಸಲು ಸಹಕರಿಸುವುದು ಮತ್ತು ಗ್ರಾಮ ಸಭೆಗಳಲ್ಲಿ ಅನುಷ್ಠಾನಾಧಿಕಾರಿಗಳು, ವಿವಿಧ ಇಲಾಖೆಗಳ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುವುದು.

2. ಗ್ರಾಮ ಪಂಚಾಯಿತಿಗಳು ಗ್ರಾಮ ವಿಕಾಸದ ಯೋಜನೆಯ ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳ ಕ್ರಿಯಾ ಯೋಜನೆ/ ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರತ್ಯೇಕವಾಗಿ ತಯಾರಿಸಲು ಮತ್ತು ಅದಕ್ಕೆ ಅನುಮೋದನೆಯನ್ನು ನೀಡಲು, ಅದರಂತೆ ಅನುಷ್ಠಾನವನ್ನು ಸಹ ಪ್ರತ್ಯೇಕವಾಗಿ ಕೈಗೊಳ್ಳಲು, ಆರ್ಥಿಕ ಮತ್ತು ಭೌತಿಕ ವರದಿಯನ್ನು ಸಹ ಪ್ರತ್ಯೇಕವಾಗಿ ಸಲ್ಲಿಸುವಂತೆ ನೆರವು ನೀಡುವುದು ಮತ್ತು ಕ್ರಮ ಕೈಗೊಳ್ಳುವುದು.

3. ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಅವಶ್ಯಕತೆಯನ್ನಾಧರಿಸಿ ಸರ್ಕಾರೇತರ ಸಂಸ್ಥೆಗಳು, ಸ್ವಸಹಾಯ ಸಂಸ್ಥೆಗಳು, ಮಹಿಳಾ ಸಂಘಗಳ ಪಾಲುದಾರಿಕೆಯನ್ನು ಖಚಿತಪಡಿಸಲು ಪಂಚಾಯತ್‌ಗಳಿಗೆ ನೆರವು ನೀಡುವುದು.

4. ತರಬೇತಿಯಂತಹ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಪಂಚಾಯತ್‌ಗಳಿಗೆ ದೊರೆಯುವಂತೆ ಮಾಡಲು ಅಥವಾ ತಾಲ್ಲೂಕು ಮಟ್ಟದಲ್ಲಿ ಸಂದರ್ಭಾನುಸಾರ ತರಬೇತಿಗಳನ್ನು ಏರ್ಪಡಿಸುವುದು.

5. ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ನಿಯಮಗಳನ್ನು ಗ್ರಾಮ ಪಂಚಾಯತ್‌ಗಳು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳುವುದು.
6. ಅಭಿವೃದ್ಧಿ ಕಾಮಗಾರಿಗಳನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸಿ ಜಿಲ್ಲಾ ಪಂಚಾಯತ್‌ಗೆ ವರದಿ ನೀಡುವುದು.
7. ಪ್ರಗತಿಯ ವರದಿಗಳನ್ನು ಗಾಂಧಿ ಸಾಕ್ಷಿ ಕಾಯಕ/ಪಂಚತಂತ್ರ ತಂತ್ರಾಂಶದಲ್ಲಿ ನಿಯತ ಕಾಲದಲ್ಲಿ ನಮೂದಿಸಿ ಜಿಲ್ಲಾ ಪಂಚಾಯತ್‌ಗೆ ಹಾಗೂ ಮಾನ್ಯ ಶಾಸಕರುಗಳಿಗೆ ಸಲ್ಲಿಸುವುದು.

## 3.6 ಜಿಲ್ಲಾ ಪಂಚಾಯತ್

1. ವಿಧಾನಸಭಾ ಸದಸ್ಯರುಗಳಿಗೆ ಗ್ರಾಮಗಳ ಜನಸಂಖ್ಯೆಯಾದಿಯನ್ನು ತಾಲ್ಲೂಕು ಪಂಚಾಯತ್‌ಗಳ ಮೂಲಕ ತಲುಪಿಸಲು ವ್ಯವಸ್ಥೆ ಮಾಡುವುದು.
2. ಗ್ರಾಮಗಳ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಲು ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ನಡುವೆ ಸಮನ್ವಯ ಸಾಧಿಸುವುದು.
3. ಸರ್ಕಾರದಿಂದ ಕಳುಹಿಸುವ ಮಂಜೂರಾತಿ ಆದೇಶ, ಸುತ್ತೋಲೆಗಳನ್ನು ಅಧೀನ ಸಂಸ್ಥೆಗಳಿಗೆ, ಅನುಷ್ಠಾನ ಸಂಸ್ಥೆಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ ತಲುಪಿಸಲು ವ್ಯವಸ್ಥೆ ಮಾಡುವುದು.
4. ಗ್ರಾಮ ಪಂಚಾಯಿತಿಗಳು ಗ್ರಾಮ ವಿಕಾಸದ ಯೋಜನೆಯ ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯಡಿಯಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳ ಕ್ರಿಯಾ ಯೋಜನೆ/ ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರತ್ಯೇಕವಾಗಿ ತಯಾರಿಸಲು ಮತ್ತು ಅನುಮೋದನೆಯಂತೆ ಅನುಷ್ಠಾನವನ್ನು ಸಹ ಕೈಗೊಳ್ಳಲು, ಆರ್ಥಿಕ ಮತ್ತು ಭೌತಿಕ ವರದಿಯನ್ನು ಸಹ ಪ್ರತ್ಯೇಕವಾಗಿ ಗ್ರಾಮ ಪಂಚಾಯಿತಿಗಳು ಸಲ್ಲಿಸುವಂತೆ ಮಾಡುವ ಕ್ರಮಗಳನ್ನು ಕೈಗೊಳ್ಳುವುದು.
5. ಗ್ರಾಮ ಪಂಚಾಯತ್‌ಗಳು ತಯಾರಿಸಿ ಅನುಮೋದಿಸಿದ ಗ್ರಾಮಾಭಿವೃದ್ಧಿ ಯೋಜನೆಯನ್ನು ಸಂಗ್ರಹ ಮಾಡಿ ಸರ್ಕಾರಕ್ಕೆ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
6. ಸರ್ಕಾರದಿಂದ ಬಿಡುಗಡೆ ಮಾಡುವ ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು EFMS ಮೂಲಕ ಗ್ರಾಮ ಪಂಚಾಯತ್‌ಗಳ ಲೆಕ್ಕಕ್ಕೆ ಹೊಂದಾಣಿಕೆ ಮಾಡುವುದು.
7. ಪ್ರಗತಿಯ ವರದಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸುವುದು.
8. ಯೋಜನೆಯ ಪ್ರಗತಿ ಕುರಿತಂತೆ ಅನುಷ್ಠಾನ ಸಂಸ್ಥೆಗಳಿಗೆ, ಪಂಚಾಯತ್ ಸಂಸ್ಥೆಗಳಿಗೆ ಸೂಕ್ತ ಸಲಹೆ, ಸಹಕಾರಗಳನ್ನು ನೀಡಿ ಯೋಜನೆಯು ಕಾಲಮಿತಿಯೊಳಗೆ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳುವುದು.


## 3.7 ರಾಜ್ಯ: ಯೋಜನೆಯ ಜವಾಬ್ದಾರಿ ಹೊಂದಿರುವ ಶಾಖೆ

1. ಕಾಲಕಾಲಕ್ಕೆ ಸರ್ಕಾರದ ಆದೇಶ, ಸುತ್ತೋಲೆ, ಮಾರ್ಗಸೂಚಿಗಳನ್ನು ಅನುಷ್ಠಾನ ಸಂಸ್ಥೆ, ಪಂ.ರಾಜ್ ಸಂಸ್ಥೆಗಳಿಗೆ ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ, ಸಂಘ ಸಂಸ್ಥೆಗಳಿಗೆ ತಲುಪಿಸುವುದು.
2. ಪ್ರಗತಿಯ ವರದಿಗಳನ್ನು ಸಂಗ್ರಹಿಸಿ, ಕ್ರೋಢೀಕರಿಸಿ, ಸಂಕಲನಗೊಳಿಸಿ ಅಧಿಕಾರಿಗಳ ಸಭೆಗೆ ಒದಗಿಸುವುದು.
3. ಗ್ರಾಮ ವಿಕಾಸದ ಯೋಜನೆಯ ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡುವುದು. ಆರ್ಥಿಕ ಮತ್ತು ಭೌತಿಕ ವರದಿಯನ್ನು ಸಹ ಪ್ರತ್ಯೇಕವಾಗಿ ಜಿಲ್ಲಾ ಪಂಚಾಯತ್‌ನಿಂದ ಪಡೆದು ವರದಿಯನ್ನು ಸಿದ್ಧಪಡಿಸುವುದು.
4. ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಗ್ರಾಮ ಪಂಚಾಯತ್‌ಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ರಾಜ್ಯ ಮಟ್ಟದಿಂದ ಅಧಿಕಾರಿಗಳನ್ನು ನಿಯೋಜಿಸುವ ಮೂಲಕ ಗ್ರಾಮ ಪಂಚಾಯತ್‌ಗಳು ಇನ್ನಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು.
5. ಗಾಂಧಿ ಸಾಕ್ಷಿ ಪ್ರಗತಿಯನ್ನಾಧರಿಸಿ ತ್ರೈಮಾಸಿಕವಾಗಿ ಅನುದಾನವನ್ನು ಬಿಡುಗಡೆ ಮಾಡುವುದು.
6. ಯೋಜನೆಯ ಪ್ರಗತಿಯನ್ನು ಪರಾಮರ್ಶೆಗೊಳಪಡಿಸಿ ಕಾಲಮಿತಿಯೊಳಗೆ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತೆ ಕ್ರಮವಹಿಸುವುದು.
7. ಅಧೀನ ಸಂಸ್ಥೆಗಳು, ಅನುಷ್ಠಾನ ಸಂಸ್ಥೆಗಳು ಅನುಷ್ಠಾನದಲ್ಲಿನ ಸಮಸ್ಯೆಗಳನ್ನು ಕುರಿತು ಸಲ್ಲಿಸುವ ಕೋರಿಕೆಗಳನ್ನು ಸ್ವೀಕರಿಸಿ ಪರಿಹಾರೋಪಾಯಗಳನ್ನು ನೀಡುವುದು.
8. ಯೋಜನೆಯ ಅನುಷ್ಠಾನದಲ್ಲಿನ ಯಶೋಗಾಥೆಗಳನ್ನು ಸಂಗ್ರಹಿಸಿ ಮಾದರಿಗಳನ್ನು ಇನ್ನಿತರೆ ಅನುಷ್ಠಾನ ಸಂಸ್ಥೆಗಳಿಗೆ ಕಳುಹಿಸಿ ಉತ್ತಮವಾಗಿ ಕೆಲಸ ನಿರ್ವಹಿಸುವಂತೆ ಪ್ರೋತ್ಸಾಹಿಸುವುದು.
9. ಯೋಜನೆಯ ಅನುಷ್ಠಾನದ ಕುರಿತು ಸಲ್ಲಿಕೆಯಾಗುವ ದೂರುಗಳ ಬಗ್ಗೆ ಪರಿಶೀಲಿಸಿ ಸೂಕ್ತ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು.

## 4. ಗ್ರಾಮ ವಿಕಾಸ ಯೋಜನೆಯಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಕ್ರಮಗಳು ಗ್ರಾಮದ ಅನುದಾನವನ್ನು ಹಂಚಿಕೆ ಮಾಡಬೇಕಾದ ವಿವರ

| ಕೈಗೊಳ್ಳಲು ಸೂಚಿಸುವ ಕಾಮಗಾರಿಗಳು | ನಿಗದಿಪಡಿಸಬೇಕಾದ ಶೇಕಡಾವಾರು ಮೊತ್ತ |
|---|---|
| 1. ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ). | 50% |
| 2. ಗ್ರಂಥಾಲಯ / ಸಾಹಿತಿ ಕಲಾವಿಧರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ. | 12% |
| 3. ಯುವಕ/ ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್/ ಗರಡಿಮನೆ/ ಫ್ಲಡ್‌ಲೈಟ್ ಆಟದ ಮೈದಾನ/ ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ. | 12% |
| 4. ಸೌರ ಬೆಳಕು ದೀಪಗಳ ಅಳವಡಿಕೆ / LED ದೀಪಗಳು | 3% |
| 5. ತಿಪ್ಪೆ / ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ) | 10% |
| 6. ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರ ಪ್ರಸಾರದ ಮೂಲ ಸೌಕರ್ಯಕ್ಕೆ. | 2% |
| 7. ಗುಡಿ (ಗ್ರಾಮ ದೇವತೆ)/ ಮಸೀದಿ/ ಚರ್ಚ್‌ಗಳ, ಪುನರುಜ್ಜೀವನ / ಜೀರ್ಣೋದ್ಧಾರ/ಕಟ್ಟಡ ನಿರ್ಮಾಣಕ್ಕಾಗಿ. | 6% |
| 8. ಫ್ಲೆಕ್ಸಿ ಫಂಡ್ | 5% |

## ನಿಗಧಿಪಡಿಸಬೇಕಾದ ಶೇಕಡಾವಾರು ಮೊತ್ತ




1. ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ).
2. ಗ್ರಂಥಾಲಯ / ಸಾಹಿತಿ ಕಲಾವಿಧರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ.
3. ಯುವಕ/ ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್/ ಗರಡಿಮನೆ/ ಫ್ಲಡ್‌ಲೈಟ್ ಆಟದ ಮೈದಾನ/ ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ.
4. ಸೌರ ಬೆಳಕು ದೀಪಗಳ ಅಳವಡಿಕೆ / LED ದೀಪಗಳು
5. ತಿಪ್ಪೆ/ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳನ್ನು ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ)
6. ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರ ಪ್ರಸಾರದ ಮೂಲ ಸೌಕರ್ಯಕ್ಕೆ.
7. ಗುಡಿ (ಗ್ರಾಮ ದೇವತೆ)/ ಮಸೀದಿ/ ಚರ್ಚ್‌ಗಳ, ಪುನರುಜ್ಜೀವನ/ಜೀರ್ಣೋದ್ಧಾರ/ಕಟ್ಟಡ ನಿರ್ಮಾಣಕ್ಕಾಗಿ.
8. ಫ್ಲೆಕ್ಸಿ ಫಂಡ್

# 5. ಗ್ರಾಮಾಭಿವೃದ್ಧಿ ಯೋಜನೆ ತಯಾರಿಸುವಾಗ ಗ್ರಾಮ ವಿಕಾಸ ಯೋಜನೆಯೊಂದಿಗೆ ಒಗ್ಗೂಡಿಸುವ ಇತರೆ ಇಲಾಖಾ ಕಾರ್ಯಕ್ರಮಗಳು



5.1.1 ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾವತಿಯಿಂದ ಅನುಷ್ಠಾನದಲ್ಲಿರುವ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ 5.1.2 ರಲ್ಲಿ ಸೂಚಿಸಿರುವ ಪರಿಮಾಣಗಳಂತೆ ಅನುಷ್ಠಾನಗೊಳಿಸುವುದು. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸ್ವಚ್ಛ ಭಾರತ ಮಿಷನ್ (ನಿರ್ಮಲ್ ಭಾರತ್ ಅಭಿಯಾನ), ಸಂಜೀವಿನಿ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳಲ್ಲಿ ದೊರೆಯಬಹುದಾದ ಅನುದಾನ ಮತ್ತು ಕೈಗೊಳ್ಳಬಹುದಾದ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಸಂಬಂಧಪಟ್ಟ ನಿರ್ದೇಶನಾಲಯಗಳಿಂದ ಹೊರಡಿಸುವ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿಗಳಂತೆ ಕಾರ್ಯಕ್ರಮಗಳನ್ನು ಜಾರಿಗೆ ತರುವುದು. ಈ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಹಣ ಪಾವತಿಗಳು ಸಂಬಂಧಪಟ್ಟ ಯೋಜನೆಗಳ ಮಾರ್ಗಸೂಚಿಗೆ ಕಡ್ಡಾಯವಾಗಿ ಒಳಪಟ್ಟಿರುತ್ತದೆ ಮತ್ತು ಅದರಂತೆ ಕ್ರಿಯಾ ಯೋಜನೆಯನ್ನು ತಯಾರಿಸುವುದು. (ಆಯಾ ಯೋಜನೆಗಳ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ).

1. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGA) – (ಅನುಬಂಧ–1)
2. ಸ್ವಚ್ಛ ಭಾರತ್ ಮಿಷನ್ ಯೋಜನೆ (SBM) – (ಅನುಬಂಧ–2)
3. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)–ಸಂಜೀವಿನಿ ಕಾರ್ಯಕ್ರಮ – (ಅನುಬಂಧ–3)
4. NRDWP ಶುದ್ಧ ಕುಡಿಯುವ ನೀರಿನ ಘಟಕಗಳು – (ಅನುಬಂಧ–4)

5.1.2 ಗ್ರಾಮ ವಿಕಾಸ ಯೋಜನೆಡಿ ಆಯ್ಕೆಯಾದ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುವ ಪಟ್ಟಿ.

| ಕ್ರ.ಸಂ. | ಕಾರ್ಯಕ್ರಮಗಳು | ಅನುಷ್ಠಾನಕ್ಕೆ ತೆಗೆದುಕೊಳ್ಳಲು ನಿಗದಿಗೊಳಿಸಿದ ಪ್ರಮಾಣ |
|---|---|---|
| 1. | ರೈತರ ಭೂ–ಅಭಿವೃದ್ಧಿ | ಕನಿಷ್ಠ 20 ರೈತರ ಭೂ ಅಭಿವೃದ್ಧಿ |
| 2. | ನಮ್ಮ ಹೊಲ–ನಮ್ಮ ದಾರಿ | ಆಯ್ಕೆಯಾದ ಗ್ರಾಮಗಳಲ್ಲಿ ಕನಿಷ್ಠ 20 ಕಿ.ಮೀ. ಹೊಲಕ್ಕೆ ಹೋಗುವ ಮಣ್ಣಿನ ರಸ್ತೆ ನಿರ್ಮಾಣ |
| 3. | ರೈತರ ಕಣ | ಕನಿಷ್ಠ 2 |
| 4. | ಕುರಿ / ದನದ ದೊಡ್ಡಿ | ಕನಿಷ್ಠ 50 ದನದ ಹಾಗೂ ಕುರಿ ದೊಡ್ಡಿ ಅಗತ್ಯತೆ ಆಧರಿಸಿ. |
| 5. | ನಮ್ಮೂರ ಕೆರೆ | ಕನಿಷ್ಠ 2 ಕೆರೆಗಳ ಪುನಶ್ಚೇತನ |
| 6. | ಮನೆಗೊಂದು ಶೌಚಾಲಯ | 100% (ಗ್ರಾಮದ ಎಲ್ಲಾ ಮನೆಗಳಿಗೂ ಶೌಚಾಲಯ ಕಡ್ಡಾಯ) |
| 7. | ಆಟದ ಮೈದಾನ | ಕನಿಷ್ಠ 2 ಆಟದ ಮೈದಾನ ನಿರ್ಮಾಣ ಮಾಡಬೇಕು. ಅದರಲ್ಲಿ 1 ಆಟದ ಮೈದಾನವನ್ನು ನಿಗದಿಯಾದ ಶೇ.12 ರ ಅನುದಾನವನ್ನು ಬಳಸಿಕೊಂಡು ಕಡ್ಡಾಯವಾಗಿ ಫ್ಲಡ್ ಲೈಟ್ ಅಳವಡಿಸಬೇಕು |
| 8. | ಸ್ಮಶಾನಾಭಿವೃದ್ಧಿ | ಕನಿಷ್ಠ 1 ಸ್ಮಶಾನಾಭಿವೃದ್ಧಿಪಡಿಸುವುದು. |
| 9. | ನಮ್ಮ ಹಳ್ಳಿ–ನಮ್ಮ ನೀರು | ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ತೆಗೆದುಕೊಳ್ಳುವುದು |
| 10. | ರಾಜೀವ್ ಗಾಂಧಿ ಸೇವಾ ಕೇಂದ್ರ | ಅವಶ್ಯಕತೆಗನುಸಾರ ಆಯ್ಕೆಯಾದ ಗ್ರಾಮದ ಗ್ರಾಮ ಪಂಚಾಯತ್ ಕೇಂದ್ರ ಸ್ಥಾನದಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ |
| 11. | ಕೃಷಿಕ ಮಹಿಳಾ ಸಶಕ್ತೀಕರಣ | 2 ರಿಂದ 5 ಗುಂಪುಗಳಿಗೆ ಪ್ರೋತ್ಸಾಹ |
| 12. | ರಾಜೀವ್ ಗಾಂಧಿ ಚೈತನ್ಯ ಯೋಜನೆ | 50 ಜನರಿಗೆ ಸ್ವ–ಉದ್ಯೋಗ 50 ಜನರಿಗೆ ಉದ್ಯೋಗಾವಕಾಶ |
| 13. | ಕೌಶಲ್ಯಾಭಿವೃದ್ಧಿ | 50 ಜನರಿಗೆ ತರಬೇತಿ |
| 14. | ಶುದ್ಧ ಕುಡಿಯುವ ನೀರಿನ ಘಟಕ | ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಠ ಒಂದು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಹಾಗೂ ಕನಿಷ್ಠ 85 LPCD ನೀರು ಒದಗಿಸುವುದು |
| 15. | ಸಂಜೀವಿನಿ–ಜೀವನೋಪಾಯ ಅಭಿಯಾನ | 100 ಮಹಿಳೆಯರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಹಾಯಧನ |
| 16. | ಕೊಳವೆ ಬಾವಿ ಮರು ಪೂರಣ ಕಾರ್ಯಕ್ರಮ | ಸ್ಥಳೀಯ ಕೊಳವೆ ಬಾವಿ/ತೆರೆದ ಬಾವಿ ಮರು ಪೂರಣ |
| 17. | ಫುಟ್‌ಬ್ರಿಡ್ಜ್‌ಗಳ ನಿರ್ಮಾಣ | ಅವಶ್ಯಕತೆಗನುಸಾರ 2ರಿಂದ 5ಫುಟ್‌ಬ್ರಿಡ್ಜ್‌ಗಳ ನಿರ್ಮಾಣ |
| 18. | ಗ್ರಾಮೀಣ ಗೋದಾಮುಗಳ ನಿರ್ಮಾಣ | ಕನಿಷ್ಠ ಒಂದು ಗ್ರಾಮೀಣ ಗೋದಾಮು ನಿರ್ಮಿಸುವುದು |
| 19. | ಉದ್ಯಾನವನ ನಿರ್ಮಾಣ / ಸಸಿ ನೆಡುವಿಕೆ, | ಅಗತ್ಯತೆ ಆಧರಿಸಿ ಉದ್ಯಾನವನ ನಿರ್ಮಾಣ ಹಾಗೂ ಕನಿಷ್ಠ 1000 ಸಸಿಗಳನ್ನು ಗ್ರಾಮದ ವ್ಯಾಪ್ತಿಯಲ್ಲಿ ನೆಡುವುದು |
| 20. | ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ | ಅವಶ್ಯಕತೆಗನುಸಾರ ಒಂದು ಸೈಬರ್/ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ |
| 21. | ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ | ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸ್ಥಳೀಯ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ನಿಗದಿಯಾದ ಶೇ.12ರ ಅನುದಾನವನ್ನು ಬಳಸಿಕೊಂಡು ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಠ ಒಂದು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ. |

5.1.3 ಗ್ರಾಮ ವಿಕಾಸ ಯೋಜನೆಡಿ ಆಯ್ಕೆಯಾದ ಗ್ರಾಮಗಳಿಗೆ ಲೋಕಸಭಾ ಸದಸ್ಯರು / ರಾಜ್ಯ ಸಭಾ ಸದಸ್ಯರು / ಶಾಸಕರುಗಳ ಪ್ರದೇಶಾಭಿವೃದ್ಧಿ ಅನುದಾನ ಅಥವಾ ರಾಜ್ಯ ಸರ್ಕಾರದಿಂದ ನೀಡುವ ಇತರೆ ಯೋಜನೆಗಳ ಅನುದಾನವನ್ನು ಅವಶ್ಯಕತೆಗೆ ತಕ್ಕಂತೆ ಒಗ್ಗೂಡಿಸಿಕೊಳ್ಳಬಹುದು.

5.1.4 ಗ್ರಾಮ ವಿಕಾಸ ಯೋಜನೆಯಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳ ಹಣಕಾಸಿನ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು. ಇತರೆ ಕಾರ್ಯಕ್ರಮಗಳಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು ಮತ್ತು ಅನುದಾನದ ವಿವರಗಳನ್ನು ಪ್ರತ್ಯೇಕವಾಗಿ ನಮೂದಿಸುವುದು ಮತ್ತು ಅದರಂತೆ ಕ್ರಿಯಾ ಯೋಜನೆಯನ್ನು ರೂಪಿಸುವುದು. ಮೇಲ್ಕಂಡ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಇದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಸಲಹೆ ಪಡೆಯುವುದು.

# 6. ನಿರ್ಬಂಧಿಸಿದ ಕಾಮಗಾರಿಗಳು / ಚಟುವಟಿಕೆಗಳು




**ಈ ಕೆಳಗೆ ಸೂಚಿಸಿದ ಅಂಶಗಳಂತೆ ನಿರ್ಬಂಧಗಳನ್ನು ವಿಧಿಸಲಾಗಿದೆ.**

6.1 ವೈಯಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದು ;

6.2 ಕಛೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು ;

6.3 ಕಛೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದು ;

6.4 ಸಾಧಿಲ್ವಾರು ವೆಚ್ಚ ಮಾಡುವುದು ;

6.5 ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಛೇರಿ ಕಾರ್ಯಕ್ಕಾಗಿ ಪಡೆಯುವುದು;

6.6 ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದು ;

6.7 ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tours) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.

# 7. ಅನುದಾನ ಹಾಗೂ ಹಣ ಪಾವತಿ

## 7.1 ಗ್ರಾಮಗಳಿಗೆ ಅನುದಾನ ನಿಗದಿ :

2011ರ ಜನಸಂಖ್ಯೆಯನ್ನು ಆಧರಿಸಿ ಆಯ್ಕೆಯಾಗುವ ಪ್ರತಿ ಗ್ರಾಮದ ಜನಸಂಖ್ಯೆಗೆ ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮೀಣ ಮತಕ್ಷೇತ್ರಕ್ಕೆ ಒಟ್ಟು ಗರಿಷ್ಠ 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಠ ರೂ.3.75 ಕೋಟಿಗಳು ಹಂಚಿಕೆ ಮಾಡುವುದು.

ಗರಿಷ್ಠ 5000 ಜನಸಂಖ್ಯೆಯನ್ನು ಮೀರಿದ 5 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವನ್ನು ರೂ. 3.75 ಕೋಟಿಗೆ ಸೀಮಿತಗೊಳಿಸಲಾಗುವುದು.

ಎರಡು ಪೂರ್ಣ ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಗರಿಷ್ಠ 8000 ಜನ ಸಂಖ್ಯೆಯನ್ನು ಮೀರಿದ 8 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವನ್ನು ರೂ. 6.00 ಕೋಟಿಗೆ ಸೀಮಿತಗೊಳಿಸಲಾಗುವುದು.

## 7.2 ಅನುದಾನ ಬಿಡುಗಡೆ ಹಾಗೂ ಪಾವತಿ :

1. ಸರ್ಕಾರವು ಪ್ರತಿ ತ್ರೈಮಾಸಿಕ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳಿಗೆ ತ್ರೈಮಾಸಿಕದ ಮೊದಲ ವಾರದಲ್ಲಿಯೇ ಬಿಡುಗಡೆ ಮಾಡುವುದು.
2. ಸರ್ಕಾರವು ನಿಗದಿಪಡಿಸಿದ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡುವುದು.
3. ಜಿಲ್ಲಾ ಪಂಚಾಯತ್‌ಗಳು ಅನುದಾನವನ್ನು ವಿಳಂಬವಿಲ್ಲದೆ EFMS/RTGS ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಪಂಚಾಯತ್ ಖಾತೆಗೆ ಹೊಂದಾಣಿಕೆ ಮಾಡುವುದು ಮತ್ತು ಖಚಿತಪಡಿಸಿಕೊಳ್ಳುವುದು.
4. ಪಂಚಾಯತ್‌ಗಳು ಅನುಷ್ಠಾನ ಸಂಸ್ಥೆಗಳ ಪ್ರಗತಿಯನ್ನಾದರಿಸಿ ಮತ್ತು ಪ್ರಗತಿಯ ವರದಿಯನ್ನು ಫೋಟೋದೊಂದಿಗೆ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿರುವುದನ್ನು ಖಚಿತಪಡಿಸಿಕೊಂಡು ತಕ್ಷಣವೇ ಚೆಕ್ ಮೂಲಕ ಹಣ ಪಾವತಿ ಮಾಡುವುದು.
5. ಹಣ ಪಾವತಿ ಚೆಕ್‌ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರು ಜಂಟಿ ಸಹಿಯನ್ನು ಮಾಡತಕ್ಕದ್ದು.

## 7.3 ಪಾರದರ್ಶಕತೆ :

1. ಗ್ರಾಮಾಭಿವೃದ್ಧಿ ಯೋಜನೆಯನ್ನು ಗ್ರಾಮ ಸಮುದಾಯದ ಸಮ್ಮುಖದಲ್ಲಿ ಅಂದರೆ ಗ್ರಾಮ ಸಭೆಯಲ್ಲಿಯೇ ಆಧ್ಯಾತಾ ಪಟ್ಟಿ ತಯಾರಿಸುವುದು.
2. ಕಾಮಗಾರಿಗಳ ಗುತ್ತಿಗೆಯನ್ನು KTPP ನಿಯಮಗಳ್ನು ಅನುಸರಿಸಿ ವಹಿಸಿಕೊಡುವುದು.
3. ಯೋಜನೆಯ ಎಲ್ಲಾ ಸಂಗ್ರಹಣೆಗಳನ್ನು KTPP ನಿಯಮಗಳ್ನು ಅನುಸರಿಸಿಯೇ ಮಾಡತಕ್ಕದ್ದು.
4. KTPP ನಿಯಮಗಳ್ನು ಉಲ್ಲಂಘಿಸಲು ಸಂಗ್ರಹಣೆಗಳ ಮೊತ್ತವನ್ನು ಕಡಿತಗೊಳಿಸಿ ಖರೀದಿ ಮಾಡುವಂತಿಲ್ಲ.

## 7.4 ಸಮವರ್ತಿತ ಸಾಮಾಜಿಕ ಪರಿಶೋಧನೆ (Concurrent Audit) :

7.4.1 ಯೋಜನೆ ಚಾಲ್ತಿಯಲ್ಲಿರುವ ಹಂತದಲ್ಲಿಯೇ ಸಮುದಾಯದ / ಸಾರ್ವಜನಿಕರ ಸಮಕ್ಷಮದಲ್ಲಿ ಕಾಲಕಾಲಕ್ಕೆ ನಿರಂತರವಾಗಿ ಸಾಮಾಜಿಕ ಪರಿಶೋಧನೆ ಮಾಡುವುದು.

### 7.4.2 ಸಮವರ್ತಿತ ಸಾಮಾಜಿಕ ಪರಿಶೋಧನೆಯಲ್ಲಿ ಪರಿಗಣಿಸಬೇಕಾದ ಅಂಶಗಳು

1. ಯೋಜನೆಯ ಮಾರ್ಗಸೂಚಿ ಅಂಶಗಳ ಸದ್ಬಳಕೆ / ಉಲ್ಲಂಘನೆ
2. ಫಲಾನುಭವಿಗಳ ಹಕ್ಕುಗಳ ಬಳಕೆ / ಉಲ್ಲಂಘನೆ
3. ಕ್ರಿಯಾ ಯೋಜನೆ ತಯಾರಿಸುವಲ್ಲಿ ಮಾರ್ಗಸೂಚಿ ಅಂಶಗಳ ಬಳಕೆ / ಉಲ್ಲಂಘನೆ
4. ಗುತ್ತಿಗೆದಾರರನ್ನು ನಿಗಧಿಪಡಿಸಲು ಪಾರದರ್ಶಕತೆ ಕಾಯ್ದುಕೊಂಡಿರುವ ಬಗ್ಗೆ
5. ಗ್ರಾಮ ಪಂಚಾಯತ್ ಮೇಲುಸ್ತುವಾರಿಯಲ್ಲಿ ಗುಣಮಟ್ಟದ ಪರಿಶೀಲನೆ ಮತ್ತು ಖಾತರಿ
6. ಗುಣಮಟ್ಟದ ಕಾಮಗಾರಿಗೆ ತಕ್ಕಂತೆ ಹಣ ಪಾವತಿ
7. ಕಾಮಗಾರಿಯಲ್ಲಿ ಅಂದಾಜು ಪಟ್ಟಿ, ಭೌತಿಕ ಅಳತೆ ಮತ್ತು ಅಳತೆ ಪುಸ್ತಕ (Measurement Book) ಗಳ ವಿವರಗಳು
8. ಇಲಾಖಾ ನಿಯಮಗಳ ಪರಿಶೀಲನೆ ಉದಾ : ದಾಸ್ತಾನು ಪುಸ್ತಕ ಇತ್ಯಾದಿ.

## 7.5 ಸಾಮಾಜಿಕ ಲೆಕ್ಕ ಪರಿಶೋಧನೆ :

1. ಯೋಜನೆಯು ಪೂರ್ಣಗೊಂಡ ನಂತರ ಸಾರ್ವಜನಿಕರ ಸಮ್ಮುಖದಲ್ಲಿ ಯೋಜನೆಯ ಎಲ್ಲಾ ಲೆಕ್ಕಪತ್ರಗಳನ್ನು ತಪಾಸಣೆಗೆ ಒಳಪಡಿಸುವುದು.
2. ಅನುಷ್ಠಾನಕ್ಕೆ ತಂದ ಕಾಮಗಾರಿಗಳನ್ನು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸುವುದು.
3. ಸಂಗ್ರಹಣೆಗಳ ವಿವರಗಳನ್ನು ಪರಿಶೀಲನೆಗೆ ಒದಗಿಸುವುದು.

# ೮. ಅಭಿವೃದ್ಧಿಯ ಅನುಷ್ಠಾನ



## 8.1 ಅನುಷ್ಠಾನದ ಕಾಲಾವಧಿ :

ಗ್ರಾಮ ವಿಕಾಸ ಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನದ ಕಾಲಮಿತಿಯೊಳಗೆ ಪೂರ್ಣಗೊಳಿಸುವುದು. ಇದಕ್ಕಾಗಿ ಅನುಬಂಧ-5 ರಲ್ಲಿರುವ ವೇಳಾಪಟ್ಟಿಯಂತೆ ಕ್ರಮವನ್ನು ವಹಿಸುವುದು.

## 8.2 ಅನುಷ್ಠಾನ ಸಂಸ್ಥೆಗಳು :

1. ಸಿವಿಲ್ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮೂಲಕ ಅನುಷ್ಠಾನ ಕೈಗೊಳ್ಳತಕ್ಕದ್ದು.
2. ಪಾರದರ್ಶಕ ವಿನಾಯಿತಿಯನ್ನು ಪಡೆದ ಕೆಆರ್ಐಡಿಎಲ್ ಸಂಸ್ಥೆಗೂ ವಹಿಸಬಹುದು.
3. ನಿರ್ಮಿತಿ ಕೇಂದ್ರಗಳಿಗೆ ವಹಿಸಿಕೊಡುವ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಅನುಮತಿ ಇಲ್ಲದೆ ಗ್ರಾಮ ವಿಕಾಸ ಯೋಜನೆಯ ಕಾಮಗಾರಿಗಳನ್ನು ವಹಿಸಿಕೊಡುವಂತಿಲ್ಲ.

# ೯. ವರದಿಗಳು ಹಾಗೂ ಯಶೋಗಾಥೆಗಳು



ಗ್ರಾಮ ಪಂಚಾಯತ್ ಅನುಷ್ಠಾನಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಪ್ರಗತಿಯ ವರದಿಗಳನ್ನು ಪ್ರತಿ ತಿಂಗಳು ನಿಗದಿಪಡಿಸುವ ದಿನಾಂಕದೊಳಗೆ ಎಂಪಿಕ್, ಆರ್‌ಎಫ್‌ಡಿ, ಎಸ್‌ಸಿಪಿ, ಟಿಎಸ್‌ಪಿ ವರದಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ನೀಡುವುದು. ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ನಿಯಮಾನುಸಾರ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ತಪ್ಪದೇ ಅಳವಡಿಸತಕ್ಕದ್ದು.

ಗ್ರಾಮ ವಿಕಾಸ ಯೋಜನೆಯ ಗ್ರಾಮಗಳಲ್ಲಿ ಗುಣಮಟ್ಟದಲ್ಲಿ ಅಭಿವೃದ್ಧಿಗೊಂಡ ಕಾಮಗಾರಿಗಳ ಎಲ್ಲಾ ವಿವರಗಳ ಯಶೋಗಾಥೆಗಳನ್ನು ಛಾಯಾಚಿತ್ರಗಳೊಂದಿಗೆ ವೆಬ್‌ಸೈಟ್‌ಗಳಲ್ಲಿ ಅಳವಡಿಸುವುದು. ಗ್ರಾಮದ ಯಶೋಗಾಥೆಯನ್ನು ಛಾಯಾಚಿತ್ರಗಳೊಂದಿಗೆ ದಾಖಲೀಕರಣಗೊಳಿಸಿ ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಮುದ್ರಣ ಮತ್ತು ವಿದ್ಯುದ್ಮಾನ ಮಾಧ್ಯಮಗಳಿಗೆ ನೀಡುವುದು.



# 10. ಪ್ರಗತಿ ಪರಿಶೀಲನಾ ಸಭೆಗಳು




1. ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಉಸ್ತುವಾರಿ ಸಮಿತಿಯು ಕಾಲಕಾಲಕ್ಕೆ ಪ್ರಗತಿಯನ್ನು ಪರಿಶೀಲಿಸುವುದು. ಅಭಿವೃದ್ಧಿಗಾಗಿ ಸಲಹೆ, ಸೂಚನೆ, ಕಾಮಗಾರಿಗಳ ವೀಕ್ಷಣೆ ಹಾಗೂ ಮಾರ್ಗದರ್ಶನ ನೀಡುವುದು.

2. ತಾಲ್ಲೂಕು ಮಟ್ಟದಲ್ಲಿ ವಿಧಾನಸಭಾ ಸದಸ್ಯರು / ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾಲಕಾಲಕ್ಕೆ ನಡೆಯುವ ಕೆಡಿಪಿ ಸಭೆಯಲ್ಲಿ ಗ್ರಾಮ ವಿಕಾಸ ಯೋಜನೆಯ ಪ್ರಗತಿಯನ್ನು ಪರಾಮರ್ಶಿಸುವುದು.

3. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾಲಕಾಲಕ್ಕೆ ನಡೆಯುವ ಕೆಡಿಪಿ / ಜಿಲ್ಲಾ ಪಂಚಾಯತ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ರಾಮ ವಿಕಾಸ ಯೋಜನೆಯ ಪ್ರಗತಿಯನ್ನು ಪರಾಮರ್ಶಿಸುವುದು.

4. ರಾಜ್ಯ ಮಟ್ಟದಲ್ಲಿ ಮಾನ್ಯ ಸಚಿವರು / ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಕಾಲಕಾಲಕ್ಕೆ ಪ್ರಗತಿಯ ಪರಾಮರ್ಶೆ ನಡೆಸುವರು.

# 11. ಮೇಲ್ವಿಚಾರಣೆ ಮತ್ತು ಉಸ್ತುವಾರಿ



1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಮಟ್ಟದಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ನಿರ್ವಹಣೆ ಮಾಡಲು ಗೊತ್ತು ಮಾಡಿದ ಅಧಿಕಾರಿಯು ತಪ್ಪದೆ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸುವುದು. ಗುಣಮಟ್ಟದ ಕಾಮಗಾರಿಗಳ ಅನುಷ್ಠಾನಕ್ಕೆ ಪಾರದರ್ಶಕ ಸಂಗ್ರಹಣೆಗಳ ಕುರಿತು ಮಾರ್ಗದರ್ಶನ ನೀಡುವುದು ಮತ್ತು ಅದಕ್ಕಾಗಿ ಎಲ್ಲಾ ಕ್ರಮಗಳನ್ನು ಜರುಗಿಸುವುದು.
2. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಾಲಕಾಲಕ್ಕೆ ಕಾಮಗಾರಿಗಳ ತಪಾಸಣೆಯನ್ನು ಮಾಡುವುದು ಮತ್ತು ಗುಣಮಟ್ಟದ ಕಾಮಾಗಾರಿಗಳ ಅನುಷ್ಠಾನಕ್ಕಾಗಿ ನಿಗಾ ಇಡುವುದು.
3. ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕಾಧಿಕಾರಿಗಳು / ನೇಮಕ ಮಾಡಿದ ನೋಡಲ್ ಅಧಿಕಾರಿಗಳು ಗ್ರಾಮ ವಿಕಾಸ ಯೋಜನೆಗಳ ಕಾಮಗಾರಿಯನ್ನು ತಪ್ಪದೇ ವೀಕ್ಷಣೆ ಮಾಡಿ ಗುಣಮಟ್ಟದ ಕಾಮಗಾರಿಗಳು ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು ಮತ್ತು ಪ್ರಗತಿ ಪರಿಶೀಲನಾ ವರದಿಗಳನ್ನು ಸಕಾಲದಲ್ಲಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು. ಈ ಸಂಬಂಧ ಕಾಲಕಾಲಕ್ಕೆ ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಾಧಿಕಾರಿಗಳ ಮತ್ತು ಪಂಚಾಯತ್ ಪ್ರತಿನಿಧಿಗಳ, ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಡೆಸುವುದು. ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಲ್ಪಿಸುವುದು ಮತ್ತು ಒಟ್ಟು ಯೋಜನೆಯ ಸಫಲತೆಗೆ ಸೂಕ್ತ ಕ್ರಮಗಳನ್ನು ಜರುಗಿಸುವುದು.

# 12. ಮುಖ್ಯಮಂತ್ರಿಗಳ 21 ಅಂಶ ಕಾರ್ಯಕ್ರಮಗಳ ಕಿರು ಪರಿಚಯ



## 1) ನಮ್ಮ ಹಳ್ಳಿ ನಮ್ಮ ನೀರು :

ನಮ್ಮ ಹಳ್ಳಿ ನಮ್ಮ ನೀರು ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಂರಕ್ಷಣೆ ಕೆಲಸಗಳು ಅಂದರೆ ಬದು ನಿರ್ಮಾಣ, ಒಡ್ಡು, ಚೆಕ್ ಡ್ಯಾಂ, ಟ್ರೆಂಚಿಂಗ್ ಮತ್ತು ಬೋರ್‌ವೇಲ್‌ಗಳ ವೈಜ್ಞಾನಿಕ ಮರುಪೂರಣ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಜನಸಂಪನ್ಮೂಲ ಹೆಚ್ಚಿಸಲು, ಅಂತರ್ಜಲದ ಮಟ್ಟ ಹೆಚ್ಚಿಸಲು ಮತ್ತು ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆಗೊಳಿಸಲು ಭೂ–ಮೇಲ್ಭಾಗದಲ್ಲಿ ಹೆಚ್ಚುವರಿ ಲಭ್ಯವಾಗಬಹುದಾದ ಮಳೆಗಾಲದ ನೀರನ್ನು ಸಂರಕ್ಷಿಸುವ ಹಿನ್ನೆಲೆಯಲ್ಲಿ ಅಂತರ್ಜಲ ಮರುಪೂರಣ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.



## 2) ಸ್ಮಶಾನ ಅಭಿವೃದ್ಧಿ :

ಸ್ಮಶಾನ ಅಭಿವೃದ್ಧಿ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳಲ್ಲಿ ಅಗಲಿದ ಆತ್ಮಗಳಿಗೆ ಗೌರವಪೂರ್ವಕ ವಿದಾಯ ಹೇಳುವಂತಾಗಲು ಅಂತ್ಯಕ್ರಿಯೆ ನಡೆಸುವ ಪ್ರದೇಶಗಳಾದ ಸ್ಮಶಾನ, ರುದ್ರಭೂಮಿ, ಮುಕ್ತಿಧಾಮ, ಖಬರಸ್ಥಾನ, ಸಿಮೆಟ್ರಿ ಮುಂತಾದವುಗಳನ್ನು ಪ್ರತಿ ಹಳ್ಳಿಗಳಲ್ಲಿ ಒಂದು ಉತ್ತಮ ವಾತಾವರಣದೊಂದಿಗೆ ಈಡೇರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಬಹುತೇಕ ಹಳ್ಳಿಗಳಲ್ಲಿ ಪ್ರತ್ಯೇಕ ಸ್ಮಶಾನ ಜಾಗವಿರುವುದಿಲ್ಲ. ಭಿನ್ನ – ಭಿನ್ನ ಸಮಾಜಗಳು ಪಾಲಿಸುವ ನಿಯಮಗಳಿಗೆ ಅನುಗುಣವಾಗಿ ಸರ್ವಜನಾಂಗದವರಿಗೆ ಅವಕಾಶವಿರುವಂತಹ ಸ್ಮಶಾನ ನಿರ್ಮಿಸುವುದು ಪ್ರಮುಖ ಗುರಿಯಾಗಿದೆ.



## 3) ರೈತರ ಭೂ ಅಭಿವೃದ್ಧಿ :



ರಾಜ್ಯದ ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತೀ ಸಣ್ಣ ರೈತರು ಹಾಗೂ ಇತರೆ ಅರ್ಹ ವೈಯಕ್ತಿಕ ಫಲಾನುಭವಿ ಜನರು ಸಾಮಾಜಿಕವಾಗಿ ದುರ್ಬಲರಾಗಿ ಉಳಿದಿದ್ದು, ಆರ್ಥಿಕವಾಗಿಯೂ ಅಶಕ್ತರಾಗಿರುವ ಕಾರಣ ದಿನನಿತ್ಯ ಜೀವನಕ್ಕಾಗಿ ಪರಾವಲಂಭಿತರಾಗಿರುತ್ತಾರೆ. ಇಂತಹ ಅರ್ಹ ವೈಯುಕ್ತಿಕ ಫಲಾನುಭವಿಗಳ ಜಮೀನುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

## 4) ರಾಜೀವ್ ಗಾಂಧಿ ಸೇವಾ ಕೇಂದ್ರ :

ಪ್ರಮುಖವಾಗಿ ಗ್ರಾಮ ಪಂಚಾಯತ್ ಕಛೇರಿಗಳಿಗೆ ಭೌತಿಕ ಸೌಲಭ್ಯವನ್ನು ಒದಗಿಸುವಂತಹ ಹಾಗೂ ಇಂತಹ ಕಟ್ಟಡಗಳಲ್ಲಿ ಗ್ರಾಮೀಣ ಜನರು, ಚುನಾಯಿತಿ ಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಮಧ್ಯೆ ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚೆ/ವಿಚಾರ ವಿನಿಮಯಗಳಿಗೆ ಅವಕಾಶ ಕಲ್ಪಿಸುವ ಸಲುವಾಗಿ "ರಾಜೀವ್ ಗಾಂಧಿ ಸೇವಾ ಕೇಂದ್ರಗಳ" ನಿರ್ಮಾಣವಾಗುತ್ತಿವೆ. ಈ ಕೇಂದ್ರಗಳು ಕೇವಲ ಗ್ರಾಮ ಪಂಚಾಯತ್‌ಗಳ ಕಛೇರಿಗಳಾಗಿರದೆ ಪಂಚಾಯತ್‌ಗಳ ವಿವಿಧ ಯೋಜನೆಗಳ ವಿಸ್ತರಣೆ ಬಗ್ಗೆ ಗ್ರಾಮ ಪಂಚಾಯತ್‌ನ ಪ್ರತಿನಿಧಿಗಳು, ಗ್ರಾಮಸ್ಥರು, ಅಧಿಕಾರಿ ನೌಕರರು ಮತ್ತು ಕಾರ್ಯಕರ್ತರು ಪರಸ್ಪರ ಚರ್ಚೆ, ವಿಚಾರ ವಿನಿಮಯ ಮಾಡಿಕೊಳ್ಳಲು ಸ್ಥಳಾವಕಾಶವನ್ನು ಕಲ್ಪಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ.






## 5) ನಮ್ಮ ಹೊಲ ನಮ್ಮ ದಾರಿ :

"ನಮ್ಮ ಹೊಲ ನಮ್ಮ ದಾರಿ" ಕಾರ್ಯಕ್ರಮದಡಿ ನಮ್ಮ ರೈತ ಬಾಂಧವರು ಹೊಲ, ಗದ್ದೆ, ತೋಟ ಹಾಗೂ ಜಮೀನುಗಳಿಗೆ ಹೋಗಿ ಬರಲು ಉತ್ತಮ ದಾರಿಗಳನ್ನು ಕಲ್ಪಿಸುವ ಸಲುವಾಗಿ ಕಂದಾಯ ಇಲಾಖೆ ಭೂಮಿಗಳನ್ನು ಅಥವಾ ರೈತರು ಒಪ್ಪಿಗೆ ಇರುವ ಪ್ರದೇಶಗಳಲ್ಲಿ ಮಾರ್ಗಸೂಚಿಗಳನ್ವಯ ರಸ್ತೆ ಸಂಪರ್ಕಗಳನ್ನು ಕಲ್ಪಿಸಲಾಗುತ್ತಿದೆ. ರೈತರ ಹೊಲ ಗದ್ದೆ, ತೋಟ, ಜಮೀನುಗಳಿಗೆ ಸಂಪರ್ಕ ಕಲ್ಪಿಸಲು ಮಣ್ಣಿನ ರಸ್ತೆಗಳನ್ನು ನಿರ್ಮಾಣ ಮಾಡುವುದರೊಂದಿಗೆ ರಸ್ತೆ ಸಂಪರ್ಕಕ್ಕೆ ಅಗತ್ಯವಾಗಿರುವ ಸಣ್ಣಪುಟ್ಟ ಸೇತುವೆಗಳು, ಮೋರಿಗಳು ಇತ್ಯಾದಿ ಅಗತ್ಯ ಕಾಮಗಾರಿಗಳನ್ನೂ ಸಹ ಕೈಗೊಳ್ಳಲಾಗುತ್ತಿದೆ.





## 6) ಆಟದ ಮೈದಾನ :

ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ದೈಹಿಕ ಹಾಗೂ ಮಾನಸಿಕ ಸ್ಥಿತಿಯನ್ನು ಉತ್ತಮ ಪಡಿಸಲು ಹಾಗೂ ಅವರಲ್ಲಿನ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ಪ್ರತಿ ಗ್ರಾಮಗಳಲ್ಲಿ ಆಟದ ಮೈದಾನ ನಿರ್ಮಿಸುವಂತಹ ಕೆಲಸವನ್ನು ಕೈಗೊಳ್ಳಲಾಗುತ್ತಿದೆ. ತನ್ಮೂಲಕ ಗ್ರಾಮೀಣ ಯುವಜನರಲ್ಲಿ ಕ್ರೀಡಾಶಕ್ತಿಗೆ ಉತ್ತೇಜನ ನೀಡಿ ಆಟದ ಮೈದಾನದಲ್ಲಿ ಮೂಲಸೌಲಭ್ಯವನ್ನು ಒದಗಿಸಿ ವಿದ್ಯಾರ್ಥಿಗಳು ಹಾಗೂ ಯುವ ಸಮುದಾಯದ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡಿ ಗ್ರಾಮೀಣ ಕ್ರೀಡೆಗಳಿಗೆ ಚೈತನ್ಯ ಒದಗಿಸುವುದು ಪ್ರಮುಖ ಗುರಿಯಾಗಿರುತ್ತದೆ.





## 7) ರೈತರ ಕಣ :

ಗ್ರಾಮೀಣ ಪ್ರದೇಶಗಳ ನಮ್ಮ ರೈತರು ಬೆಳೆದ ಬೆಳೆ ಕಾಳಾಗಿ ಮನೆ ಸೇರಲು ಕಾರಣವಾಗುವ ಜಾಗವೇ ಕಣ. ಸಣ್ಣ ಮತ್ತು ಅತೀ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಕಣ ನಿರ್ಮಿಸಿಕೊಂಡುವಂತಹ ಕಾರ್ಯಕ್ರಮಗಳನ್ನುಅನುಷ್ಠಾನಗೊಳಿಸಲಾಗುತ್ತಿದೆ. ರೈತರು ತಾವು ಬೆಳೆದಂತಹ ಬೆಳೆಗಳನ್ನು ಸಂಸ್ಕರಿಸಲು ಗ್ರಾಮ ಮಟ್ಟದಲ್ಲಿ ಅಥವಾ ಗ್ರಾಮ ಪಂಚಾಯತ್ ಮಟ್ಟದಲ್ಲಿ ಒಕ್ಕಣೆ / ಸಂಸ್ಕರಣೆಗಾಗಿ ಸರ್ವಋತು ಕಣಗಳನ್ನು ನಿರ್ಮಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ.









## 8) ಕುರಿ /ದನದ ದೊಡ್ಡಿ :

ಗ್ರಾಮೀಣ ಪ್ರದೇಶಗಳ ಪ್ರಮುಖ ಕೃಷಿಯೇತರ ಕಸುಬುಗಳಾದ ಜಾನುವಾರು ಸಾಕಾಣಿಕೆಯಂತಹ ಕಾರ್ಯಗಳಿಗೆ ಉತ್ತೇಜಿಸಲು ನಮ್ಮ ರೈತರಿಗೆ ಕುರಿ/ದನದ ದೊಡ್ಡಿ ನಿರ್ಮಾಣದಂತಹ ಕೆಲಸಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ರೈತರ ಜಮೀನುಗಳಲ್ಲಿ ಕೃಷಿಯೇತರ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಪಶು ಸಂಗೋಪನಾ ಇಲಾಖೆಯ ಕಾಮಗಾರಿಗಳಾದ ದನದ ಕೊಟ್ಟಿಗೆ, ಕೋಳಿ ಸಾಕಾಣಿಕೆ ಕೇಂದ್ರ ಮತ್ತು ಕುರಿ ದೊಡ್ಡಿ ನಿರ್ಮಾಣದಂತಹ ಕೆಲಸಗಳಿಗೆ ಆದ್ಯತೆ ನೀಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ವರ್ಗಗಳ ಕುಟುಂಬಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಬುಡಕಟ್ಟು ಹಾಗೂ ಪಾರಂಪರಿಕ ಅರಣ್ಯವಾಸಿಗಳ ಫಲಾನುಭವಿಗಳ ಉಪಯೋಗಕ್ಕಾಗಿ ಆದ್ಯತೆ ನೀಡಲಾಗುತ್ತಿದೆ.



## 9) ನಮ್ಮೂರ ಕೆರೆ :

ಗ್ರಾಮೀಣ ಪ್ರದೇಶಗಳಲ್ಲಿ ಜಲ ಸಂರಕ್ಷಣೆಯಂತಹ ಪ್ರಮುಖ ಕೆಲಸಗಳನ್ನು ಪಂಚಾಯತಿ ವ್ಯಾಪ್ತಿಗೆ ಒಳಪಡುವ ಕೆರೆಗಳಿಗೆ ಪುನ:ಶ್ಚೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿರುವ ಕೆರೆಗಳ ಸಂರಕ್ಷಣೆಗಾಗಿ ಕ್ರಮ ಕೈಗೊಂಡು ಗ್ರಾಮೀಣ ಜನರ ಬದುಕಿಗೆ ಆಸರೆಯಾದ ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳನ್ನು ಅಗತ್ಯತೆಗೆ ತಕ್ಕಂತೆ ಸಂರಕ್ಷಿಸಿ ತನ್ಮೂಲಕ ಪರಿಸರವನ್ನು ಉತ್ತಮಪಡಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ.





## 10) ಮನೆಗೊಂದು ಶೌಚಾಲಯ :




ಗ್ರಾಮೀಣ ಜನರ ಸ್ವಾಭಿಮಾನ, ಘನತೆಯ ಪ್ರತೀಕವಾಗಿ ಹಳ್ಳಿಯ ಪ್ರತಿಯೊಂದು ಮನೆಗಳಲ್ಲಿ ಕಡ್ಡಾಯವಾಗಿ ಶೌಚಾಲಯ ನಿರ್ಮಾಣ ಮಾಡುವಂತಾಗಿ ರಾಜ್ಯವನ್ನು ಬಯಲು ಬರ್ಹಿದೆಸೆ ಮುಕ್ತ ರಾಜ್ಯವನ್ನಾಗಿಸುವ ಹಿನ್ನೆಲೆಯಲ್ಲಿ ಮನೆಗೊಂದು ಶೌಚಾಲಯ ಕಾರ್ಯಕ್ರವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವೈಯಕ್ತಿಕ ನೈರ್ಮಲ್ಯ / ಶುಚಿತ್ವ ಕಾಪಾಡುವುದು, ಗ್ರಾಮೀಣ ಸಮುದಾಯಕ್ಕೆ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವುದು, ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ನಿಯಂತ್ರಣಗೊಳಿಸುವುದು ಮತ್ತು ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ರಾಜ್ಯವನ್ನು ಬಯಲು ಬರ್ಹಿದೆಸೆ ಮುಕ್ತ ಮಾಡುವುದು ಪ್ರಮುಖ ಗುರಿಯಾಗಿರುತ್ತದೆ.

## 11) ಕೃಷಿಕ ಮಹಿಳಾ ಸಶಕ್ತೀಕರಣ :

ಕೃಷಿ ಅವಲಂಬಿತ ಗ್ರಾಮೀಣ ಮಹಿಳೆಯರ ಪ್ರಸ್ತುತ ಸ್ಥಿತಿಯಲ್ಲಿ ಸುಧಾರಣೆ ತಂದು ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಿನ ಅವಕಾಶವನ್ನು ಕಲ್ಪಿಸುವುದಕ್ಕಾಗಿ ಕೃಷಿಕ ಮಹಿಳಾ ಸಶಕ್ತೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಗ್ರಾಮೀಣ ಭಾಗದ ರೈತ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸುವಲ್ಲಿ ಹಾಗೂ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ತರಬೇತಿ ನೀಡಿ, ಅವರನ್ನು ಕೃಷಿ ಚಟುವಟಿಕೆಗಳಲ್ಲಿ ಹಾಗೂ ಆರ್ಥಿಕವಾಗಿ ಸಬಲೀಕರಣ ಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.



## 12) ರಾಜೀವ್‌ಗಾಂಧಿ ಚೈತನ್ಯ ಯೋಜನೆ :



ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ 40–50 ಯುವಜನರಂತೆ 6063 ಗ್ರಾಮ ಪಂಚಾಯಿತಿಗಳಿಂದ ಒಟ್ಟು 2 ಲಕ್ಷದಷ್ಟು ಗ್ರಾಮೀಣ ನಿರುದ್ಯೋಗಿ ಯುವ ಜನರನ್ನು ಗುರುತಿಸಿ ಅವರುಗಳನ್ನು ಸ್ವಾವಲಂಬಿಗಳಾಗಿ – ಸ್ವಾಭಿಮಾನಿಗಳಾಗಿ ಜೀವಿಸುವಂತೆ ಮಾಡಲು ವಿವಿಧ ವಲಯಗಳಲ್ಲಿ ತರಬೇತಿ ನೀಡಿ ಸ್ವ–ಉದ್ಯೋಗಾವಾಶಗಳನ್ನು ಕಲ್ಪಿಸುವಂತಹ ಕೆಲಸಗಳನ್ನು ಕೈಗೊಳ್ಳಲಾಗಿದೆ. ಯಾವುದೇ ಸರ್ಕಾರಿ ಯೋಜನೆಗಳ ಪ್ರತಿಫಲ ಪಡೆಯದ ಗ್ರಾಮೀಣ ನಿರುದ್ಯೋಗ ಯುವಜನತೆಗೆ ವೃತ್ತಿಕೌಶಲ್ಯ ತರಬೇತಿಗಳನ್ನು ನೀಡಿ ವಿವಿಧ ಸಂಘಸಂಸ್ಥೆಗಳಲ್ಲಿ, ಸರ್ಕಾರದಲ್ಲಿ ಹಾಗೂ ಖಾಸಗಿ ವಲಯದಲ್ಲಿ ಉದ್ಯೋಗ ಕಲ್ಪಿಸಲು ಸಹಾಯ ಮಾಡುವುದು ಪ್ರಮುಖ ಉದ್ದೇಶವಾಗಿರುತ್ತದೆ.

## 13) ಕೌಶಲ್ಯಾಭಿವೃದ್ಧಿ :

ರಾಜ್ಯದ ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳಿಗೆ ಕೌಶಲ್ಯಾಧಾರಿತ ಉದ್ಯೋಗಗಳಿಗೆ ಸಜ್ಜಾಗುವಂತೆ ತರಬೇತಿ ನೀಡಲು "ಸಂಜೀವಿನಿ" ಹೆಸರಿನಲ್ಲಿ ಸ್ಥಳೀಯಮಟ್ಟದಲ್ಲೆ ಅವಕಾಶ ಕಲ್ಪಿಸಲಾಗುತ್ತಿದ್ದು, ಪ್ರಮುಖವಾಗಿ ಗಣಕ ಯಂತ್ರ, ಹೋಲಿಗೆ, ಸಿದ್ದ ಉಡುಪು ಮುಂತಾದ ವಿವಿಧ ಪ್ರಕಾರಗಳ ತರಬೇತಿ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಜನತೆಗೆ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಯಾಧಾರಿತ ಕೌಶಲ್ಯಗಳನ್ನು ವೃದ್ಧಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಲಾಗಿದೆ.



## 14) ಸಂಜೀವಿನಿ – ಜೀವನೋಪಾಯ ಅಭಿಯಾನ :

ಗ್ರಾಮೀಣ ಪ್ರದೇಶಗಳ ಸ್ವಸಹಾಯ ಸಂಘಗಳಿಗೆ ಅಗತ್ಯವಿರುವ ವಿವಿಧ ಹಂತಗಳ ತರಬೇತಿ, ಕೌಶಲ್ಯಾಭಿವೃದ್ಧಿ ಚಟುವಟಿಕೆ, ಬ್ಯಾಂಕ್ ಸಂಪರ್ಕ ಒದಗಿಸುವುದು ಹಾಗೂ ನಂತರದಲ್ಲಿ ಅನುಸರಣಾ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾಂಸ್ಥಿಕ ವೇದಿಕೆಗಳನ್ನು ಸ್ಥಾಪಿಸಿ ಜೀವನೋಪಾಯ ಚಟುವಟಿಕೆಗಳನ್ನು ಸ್ಥಳೀಯಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಸ್ವಸಹಾಯ ಸಂಘದ ರಚನೆ, ಬ್ಯಾಂಕಿನ ಸಂಪರ್ಕ, ಆರ್ಥಿಕ ಸೌಲಭ್ಯದ ಅರಿವು ನೀಡಿ ಕೃಷಿ ಹಾಗೂ ಇತರೆ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡುವುದು ಪ್ರಮುಖ ಉದ್ದೇವಾಗಿರುತ್ತದೆ.





## 15) ಶುದ್ಧ ಕುಡಿಯುವ ನೀರಿನ ಘಟಕಗಳು :

ಗ್ರಾಮೀಣ ಪ್ರದೇಶಗಳ ಜನವಸತಿ ಉಪ ಯೋಗಿಸುತ್ತಿರುವ ಕುಡಿಯುವ ನೀರು ಭೌತಿಕ, ರಾಸಾಯನಿಕ ಹಾಗೂ ಜೈವಿಕವಾಗಿ ಕಲುಷಿತಗೊಂಡಿರುವ ಹಿನ್ನೆಲೆಯಲ್ಲಿ ಅಧಿಕ ಫ್ಲೋರೈಡ್, ಆರ್ಸೆನಿಕ್ ಹಾಗೂ ಇತರೆ ಕಲುಷಿತ ನೀರನ್ನು ಶುದ್ಧಿಕರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಶುದ್ಧ ಕುಡಿಯುವ ನೀರು ಬದುಕಿಗೆ ಆಧಾರ. ಗ್ರಾಮೀಣ ಜನತೆ ಸ್ವಯಂಚಾಲಿತ ಶುದ್ಧ ನೀರು ವಿತರಿಸುವ ಯಂತ್ರದಿಂದ ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳುವಂತೆ ಮಾಡಿ ತನ್ಮೂಲಕ ಗ್ರಾಮೀಣ ಜನರ ಆರೋಗ್ಯ ಸ್ಥಿತಿಯನ್ನು ಕಾಪಾಡುವುದೇ ಪ್ರಮುಖ ಉದ್ದೇಶ.

## 16) ಕೊಳವೆ ಬಾವಿ ಮರು ಪೂರಣ :

ವಾತಾವರಣದ ವೈಪರೀತ್ಯದಿಂದಾಗಿ ಬರಪರಿಸ್ಥಿತಿಯನ್ನು ಬಹುತೇಕ ಗ್ರಾಮೀಣ ಪ್ರದೇಶಗಳು ಪ್ರತೀ ವರ್ಷವೂ ಎದುರಿಸುವಂತಾಗಿದ್ದು, ಗ್ರಾಮೀಣ ಜನತೆ ಹಾಗೂ ಜಾನುವಾರುಗಳು ಕುಡಿಯುವ ನೀರಿಗಾಗಿಯೂ ಪರಿತಪಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳ ರೈತಾಪಿ ವರ್ಗದ ಜಮೀನುಗಳು ಮತ್ತು ಕುಡಿಯುವ ನೀರಿಗಾಗಿ ಬಳಸಲ್ಪಡುತ್ತಿದ್ದ ಬತ್ತಿರುವ ಕೊಳವೆ ಬಾವಿಗಳನ್ನು ಮರುಪೂರಣ ಮಾಡುವುದು ಪ್ರಮುಖ ಉದ್ದೇಶವಾಗಿರುತ್ತದೆ.



## 17) ಫುಟ್ ಬ್ರಿಡ್ಜ್‌ಗಳ ನಿರ್ಮಾಣ :




ರಾಜ್ಯದಲ್ಲಿ ಕೆಲವೊಂದು ಗ್ರಾಮಗಳು ಅರಣ್ಯ ಪ್ರದೇಶ, ನದಿ, ಹೊಳೆ ದಂಡೆಯಲ್ಲಿದ್ದು, ದಿನನಿತ್ಯದ ಕೆಲಸ ಕಾರ್ಯಗಳಿಗೆ, ಮಕ್ಕಳು ಶಾಲೆಗೆ, ರೈತರು ತಮ್ಮ ಬೆಳೆಗಳನ್ನು ಪೇಟೆಗೆ ಒಯ್ಯಲು ಹೊಳೆ, ನದಿ ಮೂಲಕ ಅಲ್ಪ ದೂರ ಕ್ರಮಿಸಬೇಕಾಗಿರುತ್ತದೆ. ಅದರಲ್ಲೂ ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಾಗಿ ಬಹುತೇಕ ಈ ಕಾರ್ಯಗಳು ಸ್ಥಗಿತಗೊಳ್ಳುತ್ತವೆ.

ಈ ಹಿನ್ನೆಲೆಯಲ್ಲಿ ಇಂತಹ ಅಡೆತಡೆಗಳನ್ನು ನಿವಾರಿಸಲು ನದಿ, ಹೊಳೆಗಳಿಗೆ ಫುಟ್‌ಬ್ರಿಡ್ಜ್‌ಗಳನ್ನು ನಿರ್ಮಿಸುವುದರೊಂದಿಗೆ ಅವರ ಜೀವನವನ್ನು ಹಸನಾಗಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವುದೇ ಪ್ರಮುಖ ಗುರಿಯಾಗಿರುತ್ತದೆ.

## 18) ಉದ್ಯಾನವನ ನಿರ್ಮಾಣ, ಗ್ರಾಮ ಸೌಂದರ್ಯೀಕರಣ :



ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಗಾಳಿ, ಮಕ್ಕಳು ಆಟಗಳಲ್ಲಿ ನಲಿದಾಡಲು ಅಗತ್ಯವಾಗಿ ಬೇಕಾದ ಉದ್ಯಾನವನಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಗ್ರಾಮೀಣ ಪ್ರದೇಶದ ಸರ್ಕಾರಿ ಖಾಲಿ ಜಾಗ, ರಸ್ತೆಗಳ ಅಕ್ಕಪಕ್ಕದಲ್ಲಿ ಸರ್ವಋತು ಮರಗಿಡಗಳ ಸಸಿಗಳನ್ನು ನೆಟ್ಟು ಆಕರ್ಷಕವಾಗಿಸುವುದಲ್ಲದೆ ಮರಗಿಡಗಳ ನೆರಳನ್ನೊದಗಿಸಿ ಗ್ರಾಮಗಳನ್ನು ಸೌಂದರ್ಯೀಕರಣಗೊಳಿಸುವುದು ಪ್ರಮುಖ ಉದ್ದೇಶವಾಗಿದೆ.

## 19) ಸೈಬರ್ /ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ :

ಗ್ರಾಮೀಣ ಪ್ರದೇಶದ ಯುವಜನತೆ ವಿದ್ಯಾವಂತರಾಗಿ ದೇಶದ ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವುದಲ್ಲದೆ ವಿದೇಶಗಳಲ್ಲಿಯೂ ಸಹ ನೆಲೆಸಿ ಸೇವೆ ಸಲ್ಲಿಸುತ್ತಿರುತ್ತಾರೆ. ಇಂತಹ ಉದ್ಯೋಗಸ್ಥರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿಯೇ ಇರುವ ಅವರ ಕುಟುಂಬಕ್ಕೆ, ಬಂಧುಬಳಗ ಮತ್ತು ಸ್ನೇಹಿತರೊಂದಿಗೆ ಸಂವಹನ ಮಾಡಲು ಅನುಕೂಲವಾಗುವಂತೆ ಸೈಬರ್ ಕೆಫೆಗಳನ್ನು ತೆರೆಯುವುದಲ್ಲದೆ ಕಂಪ್ಯೂಟರ್ ಕೇಂದ್ರಗಳನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದ ಆಸಕ್ತರಿಗೆ ಕಂಪ್ಯೂಟರ್ ಕಲಿಕೆ ಮತ್ತು ಮಕ್ಕಳಿಗೆ ವಿಡಿಯೋ ಗೇಮ್ಸ್ ಹಾಗೂ ಇನ್ನಿತರೆ ತಂತ್ರಾಂಶಗಳ ಬಳಕೆಗೆ ನೆರವಾಗುವುದು ಪ್ರಮುಖ ಉದ್ದೇಶವಾಗಿರುತ್ತದೆ.



## 20) ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ :

ಗ್ರಾಮೀಣ ಪ್ರದೇಶಗಳು ಜನಪದ ಕಲೆಗಳ ತವರೂರು. ಜಾನಪದ ಹಿನ್ನೆಲೆ ಹಾಗೂ ಇತರೆ ಕಲೆಗಳ ಬಗ್ಗೆ ಅನುಭವಸ್ಥರಾದ ಅದ್ಭುತ ಕಲೆಗಾರರು ಗ್ರಾಮೀಣ ಪ್ರದೇಶದಲ್ಲಿದ್ದು ಹೊರ ಪ್ರಪಂಚಕ್ಕೆ ಪರಿಚಯವಾಗಿರಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಇಂತಹ ಗ್ರಾಮೀಣ ಪ್ರತಿಭೆಗಳು ಮತ್ತು ಕಲೆಗಳು ನಶಿಸಿ ಹೋಗುವ ಸಂಭವವಿರುತ್ತದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರತಿಭೆಗಳ ಕಲಾ ಪ್ರಾಕಾರಗಳಿಗೆ ಪ್ರದರ್ಶನ ವೇದಿಕೆಯನ್ನು ಒದಗಿಸಿ, ಸಾಂಸ್ಕೃತಿಕ ಕೇಂದ್ರಗಳನ್ನು ತೆರೆದು ಜನಪದ ಕಲಾಕಾರರನ್ನು ಒಟ್ಟುಗೂಡಿಸಿ ಗ್ರಾಮೀಣ ಕಲೆ ಹಾಗೂ ಜನಪದ ಸಂಪ್ರದಾಯವನ್ನು ಉಳಿಸಿ ಬೆಳೆಸುವುದು ಪ್ರಮುಖ ಉದ್ದೇಶವಾಗಿರುತ್ತದೆ.



## 21) ಗ್ರಾಮೀಣ ಗೋದಾಮುಗಳ ನಿರ್ಮಾಣ :



ರೈತಾಪಿ ವರ್ಗದ ಜನ ತಾವು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಉತ್ತಮ ಬೆಲೆ ದೊರಕಿಸಿಕೊಡುವುದು ಅತ್ಯಂತ ಅಗತ್ಯವಾಗಿರುತ್ತದೆ. ಇಂತಹ ಸನ್ನಿವೇಶಗಳಲ್ಲಿ ರೈತರು ಬೆಳೆದ ಫಸಲನ್ನು ಉತ್ತಮ ಬೆಲೆ ಬರುವವರೆಗೆ ಕಾಯ್ದಿಟ್ಟುಕೊಳ್ಳಲು ಗೋದಾಮುಗಳ ಅವಶ್ಯಕತೆ ಇರುತ್ತವೆ. ಆದರೆ ಬಹುತೇಕ ರೈತಾಪಿ ವರ್ಗ ಗೋದಾಮುಗಳನ್ನು ನಿರ್ಮಿಸಲು ಶಕ್ತರಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಇಂತಹ ರೈತಾಪಿ ವರ್ಗಕ್ಕೆ ಗೋದಾಮುಗಳನ್ನು ನಿರ್ಮಿಸಿಕೊಟ್ಟು ಅವರ ಸಬಲೀಕರಣಕ್ಕೆ ನಾಂದಿಯಾಗುವುದೇ ಪ್ರಮುಖ ಉದ್ದೇಶವಾಗಿರುತ್ತದೆ.

# ಮಾದರಿ :

## ಕೊಪ್ಪಳ ಜಿಲ್ಲೆ ಹಿಟ್ನಾಳ ಹಾಗೂ ಗದಗ ಜಿಲ್ಲೆಯ ಕಣಕಿಕೊಪ್ಪ ಗ್ರಾಮ ಪಂಚಾಯತ್‌ನಲ್ಲಿ ಮಾದರಿ ತಿಪ್ಪೆಗುಂಡಿ ವಿಲೇವಾರಿ

ಗ್ರಾಮದ ಕಸವನ್ನು ರಸವನ್ನಾಗಿ ಪರಿವರ್ತಿಸಿ ನೈರ್ಮಲತೆ ಕಾಪಾಡಲು ಹೊಸ ಪ್ರಯೋಗವಾದ "ಮಾಧ್ಯಮ" ಜೈವಿಕ ಗೊಬ್ಬರವನ್ನು ಬಳಸಿ ಘನತ್ಯಾಜ್ಯ ವಿಲೇವಾರಿ ಮಾಡುಲಾಗುತ್ತಿದೆ. 'ಮಾಧ್ಯಮ' ತ್ಯಾಜ್ಯ ವಸ್ತುಗಳನ್ನು ಸಾವಯವ ಗೊಬ್ಬರವಾಗಿ ಪರಿವರ್ತಿಸುವ ಸೂಕ್ಷ್ಮ ಪೋಷಕಾಂಶಗಳನ್ನು ಹೆಚ್ಚಿಸುವ ಪದಾರ್ಥವಾಗಿದ್ದು, ಇದನ್ನು ತಿಪ್ಪೆಗುಂಡಿಗಳು, ಜೈವಿಕ ತ್ಯಾಜ್ಯ ಮತ್ತು ಇತರೆ ತ್ಯಾಜ್ಯಗಳ ಮೇಲೆ ಸಿಂಪಡಣೆ ಮಾಡುವ ಮೂಲಕ ಸಾವಯವ ಗೊಬ್ಬರವನ್ನು ತಯಾರಿಸಲಾಗುತ್ತಿದೆ.

ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳು, ಸಗಣಿ ಇತ್ಯಾದಿಗಳನ್ನು ಶೇಖರಣೆ ಮಾಡಿದ ತಿಪ್ಪೆಗುಂಡಿಗಳ ಮೇಲೆ 'ಮಾಧ್ಯಮ'ವನ್ನು ಸಿಂಪಡಣೆ ಮಾಡಿ (ಒಂದು ಟನ್ ತಿಪ್ಪೆತಾಜ್ಯಕ್ಕೆ ಒಂದು ಕೆಜಿ ಮಾಧ್ಯಮ ಪುಡಿ) ತೇವಾಂಶ ಇರುವಂತೆ ನೋಡಿಕೊಂಡು 20 ದಿನಗಳ ನಂತರ ಮತ್ತೊಂದು ಭಾರಿ ಸಿಂಪಡಣೆ ಮಾಡಿ ತ್ಯಾಜ್ಯಗಳನ್ನು 45 ದಿನಗಳ ಅವಧಿಯಲ್ಲಿ ಸಾವಯವ ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದೆ.

ಜೈವಿಕ ಗೊಬ್ಬರವನ್ನು ಬಳಸುವುದರ ಮೂಲಕ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದಾಗಿದ್ದು, ಹೆಚ್ಚಿನ ಇಳುವರಿ ಪಡೆಯಲು ಸಹಾಯಕವಾಗಿದೆ. ರಾಸಾಯನಿಕ ಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದರ ಮೂಲಕ ಕೃಷಿಯ ಖರ್ಚನ್ನು ಕಡಿಮೆ ಮಾಡಬಹುದಾಗಿದೆ.



# ಅನುಬಂಧ–1

## ಗ್ರಾಮ ವಿಕಾಸ ಯೋಜನೆಯಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಒಗ್ಗೂಡಿಸುವಿಕೆಯೊಂದಿಗೆ ತೆಗೆದು ಕೊಳ್ಳಬಹುದಾದ ಕೆಲಸಗಳ ವಿವರ

ಗ್ರಾಮ ವಿಕಾಸ ಯೋಜನೆ ಮಾರ್ಗಸೂಚಿ ಕಂಡಿಕೆ–2.2 ರಲ್ಲಿ ಯೋಜನೆ ಉದ್ದೇಶಗಳನ್ನು ತಿಳಿಯ ಪಡಿಸಲಾಗಿದೆ. ಸ್ವಚ್ಚತೆ, ಶಿಕ್ಷಣ, ಆರೋಗ್ಯ, ಹಿಂದುಳಿದ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಪ್ರದೇಶಗಳಲ್ಲೂ ಅಗತ್ಯ ಮೂಲಭೂತ ಸೌಲಭ್ಯ, ಸ್ವಯಂ ಉದ್ಯೋಗ, ಕೃಷಿಯೇತರ ಉದ್ಯೋಗ ಅವಕಾಶ, ಸ್ವ–ಸಹಾಯ ಗುಂಪುಗಳ ಮೂಲಕ ಜಾಗೃತಿ ಮತ್ತು ಅಭಿವೃದ್ಧಿ, ಕ್ರಿಯಾಶೀಲ ಪರಿಸರಗಳಿಗೆ ಆದ್ಯತೆ ನೀಡಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾಯ್ದೆ – 2005ರ ಹಕ್ಕು ಆಧಾರಿತ, ಜನರ ಸಹಭಾಗಿತ್ವದ ಯೋಜನೆ ಆಗಿರುವುದರಿಂದ ಗ್ರಾಮ ವಿಕಾಸ ಯೋಜನೆಯ ಉದ್ದೇಶಗಳಿಗೆ ಪೂರಕವಾಗಿದ್ದು, ಬಹಳಷ್ಟು ವಿಕಾಸ/ಅಭಿವೃದ್ಧಿಗೆ ವಿನಿಯೋಗಿಸಿಕೊಳ್ಳಲು ಅವಕಾಶವಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ –2013, ನಾಲ್ಕನೇ ಆವೃತ್ತಿ, ಅನುಸೂಚಿ – 1,2 ರಲ್ಲಿ ಇಂತಹ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣ ನೊಂದಾಯಿತ ಕುಟುಂಬಕ್ಕೆ 100 ದಿನಗಳ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಮೂಲಭೂತ ಸೌಕರ್ಯ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ದುರ್ಬಲ ವರ್ಗದವರಿಗೆ ವೈಯಕ್ತಿಕ ಆಸ್ತಿ ನಿರ್ವಹಣೆ ಹಾಗೂ ಗ್ರಾಮೀಣ ಜೀವನೋಪಾಯದ ಸ್ವ–ಸಹಾಯ ಗುಂಪುಗಳಿಗೆ ಮೂಲಭೂತ ಸೌಲಭ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಈ ಕಾಮಗಾರಿಗಳನ್ನು ನೊಂದಾಯಿತ ಉದ್ಯೋಗ ಚೀಟಿ ಹೊಂದಿದ ವಯಸ್ಕರುಗಳನ್ನು ಅವರ ಬೇಡಿಕೆ ಆಧರಿಸಿ ಗ್ರಾಮ ಸಭೆ ಮೂಲಕ ಅನುಮೋದಿತ ಕಾಮಗಾರಿಗಳ ಮೂಲಕ ಕೈಗೆತ್ತಿಕೊಳ್ಳಬೇಕಾಗುತ್ತದೆ. ಅನುಷ್ಠಾನ ಕಾಯಿದೆ ಮತ್ತು ಮಾರ್ಗಸೂಚಿಗಳ ಷರತ್ತಿಗೆ ಒಳಪಡುತ್ತದೆ. ಪ್ರವರ್ಗವಾರು ತೆಗೆದುಕೊಳ್ಳಬಹುದಾದ ಕಾಮಗಾರಿ ವಿವರ ಈ ಕೆಳಗಿನಂತಿದೆ.

### I. ಪ್ರವರ್ಗ– ಎ: ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದ ಲೋಕೋಪಯೋಗಿ ಕಾಮಗಾರಿಗಳು

i) ಕುಡಿಯುವ ನೀರಿನ ಮೂಲಗಳ ನೀರಿನ ಕೊಯ್ಲು ಸೇರಿದಂತೆ ಅಂತರ್ಜಲದ ಮರುಪೂರಣ ಕಾಮಗಾರಿಗಳಿಗೆ ವಿಶೇಷ ಒತ್ತು ನೀಡುವ ತಡೆಗಟ್ಟುಗಳು, ಮಣ್ಣಿನ ಅಣೆಕಟ್ಟುಗಳು, ನಿಲುಗಡೆ ಕಟ್ಟುಗಳು ತಳಹದಿಯ ತಡೆಗಳು (dykes), ಇವುಗಳಿಂದ ಅಂತರ್ಜಲ ಮಟ್ಟವನ್ನು ಸುಧಾರಣೆ ಮಾಡಲು ಹಾಗೂ ಹೆಚ್ಚಿಸುವ ಸಲುವಾಗಿ ಜಲ ಸಂರಕ್ಷಣೆ ಹಾಗೂ ನೀರು ಕೊಯ್ಲು ವಿನ್ಯಾಸದ ಕಾಮಗಾರಿಗಳು.

ii) ಜಲಾನಯನ ನಿರ್ವಹಣೆ ಸಮಪಾತಳಿ ಕಂದಕಗಳು ಟೆರೆಸಿಂಗ್ (terracing), ಸಮಪಾತಳಿ ಬದುಗಳ ರಚನೆ ಕಲ್ಲುಗಳ ತಡೆ (boulder checks) ಹೊದರು ಕಡ್ಡಿಯ ರಚನೆ (gabion structures) ಮತ್ತು

spring shed ಅಭಿವೃದ್ಧಿಯಂತಹ ಈ ಕಾಮಗಾರಿಗಳ ಪರಿಣಾಮದಿಂದಾಗಿ ಜಲಾನಯನ ಪ್ರದೇಶಕ್ಕೆ ಪರಿಪೂರ್ಣತೆಯ ಚಿಕಿತ್ಸೆ.

iii) ಅತಿ ಸೂಕ್ಷ್ಮ ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಸೃಷ್ಟಿ, ಜೀರ್ಣೋದ್ಧಾರ ಮತ್ತು ಸಣ್ಣ ನೀರಾವರಿ ನಾಲೆಗಳ ಮತ್ತು ಚರಂಡಿಗಳ ನಿರ್ಮಾಣ.

iv) ಸಾಂಪ್ರದಾಯಿಕ ಜಲಸಂಚಯಗಳ ಪುನಶ್ಚೇತನಗೊಳಿಸುವ ಕಾಮಗಾರಿಗಳು, ಕೆರೆಗಳ ಹೂಳೆತ್ತುವುದು ಸೇರಿದಂತೆ ಹಾಗೂ ಇತರೆ ನೀರಿನ ಸಂಚಯ ಕಾಮಗಾರಿಗಳು.

v) ಅರಣ್ಯೀಕರಣ, ನೆಡುತೋಪುಗಳು, ಅರಣ್ಯ ಜಮೀನಿನಲ್ಲಿ ಮತ್ತು ಸಾಮಾನ್ಯ ಜಮೀನುಗಳಲ್ಲಿ ಗಿಡಗಳ ನೆಡುವಿಕೆ ಮತ್ತು ತೋಟಗಾರಿಕೆ, ರಸ್ತೆ ಅಂಚುಗಳು, ನಾಲೆಗಳ ಬದುಗಳು, ಕೆರೆ ಅಂಗಳಗಳು ಮತ್ತು ಕರಾವಳಿ ಪ್ರದೇಶಗಳು ಮತ್ತು ಅನುಬಂಧ 1ರ ಕಂಡಿಕೆ (5)ರಲ್ಲಿ ಇರುವ ಅರ್ಹ ಪ್ರವರ್ಗಗಳ ಫಲಾನುಭವಿಗಳ ಕುಟುಂಬಗಳಿಗೆ ಹಕ್ಕು ಆಧಾರಿತ ಸೌಲಭ್ಯಗಳನ್ನು ನೀಡುವಿಕೆ ಮತ್ತು

vi) ಸಾಮಾನ್ಯ/ಸಾರ್ವಜನಿಕರ ಜಮೀನುಗಳಲ್ಲಿ ಭೂ ಅಭಿವೃದ್ಧಿ ಕಾಮಗಾರಿಗಳು

## II. ಪ್ರವರ್ಗ – ಬಿ : ದುರ್ಬಲ ವರ್ಗದವರಿಗೆ ವೈಯಕ್ತಿಕ ಆಸ್ತಿಗಳ ನಿರ್ಮಾಣ (ಕಂಡಿಕೆ (5)ರಲ್ಲಿ ಇರುವ ಕುಟುಂಬಗಳಿಗೆ ಮಾತ್ರ)

i) ಅನುಬಂಧ 1ರ ಕಂಡಿಕೆ (5) ರಲ್ಲಿ ನಿರ್ದಿಷ್ಟವಾಗಿ ಸೂಚಿಸಲಾದ ಕುಟುಂಬಗಳ ಜಮೀನುಗಳ ಉತ್ಪಾದಕತೆಯನ್ನು ಸುಧಾರಿಸುವ ಸಲುವಾಗಿ ಅಗೆದ ಬಾವಿಗಳು (Dug wells), ಕೃಷಿ ಹೊಂಡಗಳು ಮತ್ತು ಇತರೆ ನೀರುಕೊಯ್ಲು ವಿನ್ಯಾಸದ ಕಾಮಗಾರಿಗಳು ಸೇರಿದಂತೆ ನೀರಾವರಿಗಾಗಿ ಸೂಕ್ತವಾದ ಮೂಲಭೂತ ಸೌಲಭ್ಯಗಳನ್ನು ಭೂ ಅಭಿವೃದ್ಧಿ ಮೂಲಕ ಒದಗಿಸುವುದು.

ii) ಕೃಷಿ, ಅರಣ್ಯದ ಕಾಮಗಾರಿಗಳು, ನೆಡುತೋಪು, ರೇಷ್ಮೆ ಮತ್ತು ತೋಟಗಾರಿಕೆ ಈ ಇಲಾಖೆಗಳ ಕಾಮಗಾರಿಗಳ ಮೂಲಕ ಜೀವನೋಪಾಯವನ್ನು ಸುಧಾರಣೆ ಮಾಡುವುದು.

iii) ಅನುಬಂಧ 1ರ ಕಂಡಿಕೆ (5) ರಲ್ಲಿ ಸೂಚಿಸಲಾದ ಕುಟುಂಬಗಳ ಬಂಜರು ಭೂಮಿಗಳಲ್ಲಿ ಅಥವಾ ಯೋಗ್ಯವಲ್ಲದ ಜಮೀನುಗಳನ್ನು ಕೃಷಿಗೆ ಯೋಗ್ಯವಾಗುವಂತೆ ಮಾಡಲು ಕ್ರಮವಹಿಸುವುದು.

iv) ಇಂದಿರಾ ಆವಾಸ್ ಯೋಜನೆ ಅಥವಾ ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಇತರೆ ಯೋಜನೆಗಳಡಿ ಮಂಜೂರಾದ ಮನೆಗಳ ನಿರ್ಮಾಣದಲ್ಲಿ ಅಕುಶಲ ಕೂಲಿ ಘಟಕದ ವೆಚ್ಚವನ್ನು ಭರಿಸಲು ಕ್ರಮ ವಹಿಸುವುದು.

v) ಜಾನುವಾರು/ಪಶು ಸಂಪತ್ತು ಕಾರ್ಯಕ್ರಮಗಳನ್ನು ಉತ್ತೇಜಿಸುವುದಕ್ಕಾಗಿ ಕೋಳಿಗಳಿಗೆ ಘಾರಂ, ಮೇಕೆಗಳಿಗೆ ದೊಡ್ಡಿ, ದನಗಳ ಕೊಟ್ಟಿಗೆ ಮತ್ತು ಮೇವುಗಳ ತೊಟ್ಟಿಗಳಂತಹ ಮೂಲಭೂತ ಸೌಲಭ್ಯಗಳಿಗೆ ನಿರ್ಮಾಣವನ್ನು ಕಲ್ಪಿಸುವುದು.

vi) ಮೀನುಗಾರಿಕೆಯನ್ನು ಉತ್ತೇಜಿಸಲು ಮೂಲಭೂತ ಸೌಲಭ್ಯಗಳಾದ ಮೀನು ಒಣಗಿಸುವ ಕಣ, ಶೇಖರಣೆ ಸೌಲಭ್ಯಗಳು ಮತ್ತು ಸಾರ್ವಜನಿಕ ಜಮೀನುಗಳಲ್ಲಿ ಆಯಾ ಋತುಮಾನ ಕಾಲದಲ್ಲಿ ನೀರಿನ ಸಂಚಯಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.

**iii) ಪ್ರವರ್ಗ–ಸಿ : ರಾಷ್ಟ್ರೀಯ ಗ್ರಾಮೀಣ ಜೀವನೋಪಾಯದ ಅಭಿಯಾನದ ಸ್ವ–ಸಹಾಯ ಗುಂಪುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.**

i) ಕೃಷಿ ಉತ್ಪನ್ನಗಳಿಗೆ ಪಕ್ಕ ಸಂಗ್ರಹಣೆ/ದಾಸ್ತಾನು ಮಾಡುವ ಸೌಲಭ್ಯಗಳು ಒಳಗೊಂಡಂತೆ, ಕೊಯ್ಲು ನಂತರದ ಮತ್ತು ಜೈವಿಕ ಗೊಬ್ಬರಗಳ ಸೌಲಭ್ಯಗಳಿಗೆ ಬೇಕಾಗುವ ದೀರ್ಘಕಾಲ ಬಾಳಿಕೆ ಬರುವ ಮೂಲಭೂತ ಸೌಲಭ್ಯಗಳನ್ನು ಸೃಜಿಸುವ ಮೂಲಕ ಕೃಷಿ ಉತ್ಪಾದನೆಯನ್ನು ಉತ್ತೇಜಿಸುವ ಕಾಮಗಾರಿಗಳು.

ii) ಸ್ವಸಹಾಯಗುಂಪುಗಳ ಜೀವನೋಪಾಯದ ಚಟುವಟಿಕೆಗಳಿಗಾಗಿ ಸಾರ್ವಜನಿಕ ಕೆಲಸಗಳಿಗೆ ಷೆಡ್‌ಗಳ ನಿರ್ಮಾಣ.

**iv) ಪ್ರವರ್ಗ– ಡಿ : ಗ್ರಾಮೀಣ ಮೂಲಭೂತ ಸೌಲಭ್ಯಗಳು**

i) ಗ್ರಾಮೀಣ ನೈರ್ಮಲ್ಯಕ್ಕೆ ಸಂಬಂಧಿಸಿದ ಬಯಲು ಮಲ ವಿಸರ್ಜನೆ ಮುಕ್ತಸ್ಥಿತಿ ಸಾಧಿಸುವ ಸಲುವಾಗಿ ಇತರೆ ಸರ್ಕಾರಿ ಇಲಾಖೆಗಳ ಯೋಜನೆಯನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ/ನೇರವಾಗಿ ಅನುಷ್ಠಾನಗೊಳಿಸುವ ಮೂಲಕ, ವೈಯುಕ್ತಿಕ ಶೌಚಾಲಯ, ಶಾಲೆಗಳಲ್ಲಿ ಶೌಚಾಲಯದ ಘಟಕಗಳು, ಅಂಗನವಾಡಿ ಶೌಚಾಲಯಗಳ ನಿರ್ಮಾಣದಂತಹ ಕಾಮಗಾರಿಗಳ ಹಾಗೂ ನಿಗಧಿಪಡಿಸಲಾದ ಮಾರ್ಗಸೂಚಿಗಳಂತೆ ಘನ ಮತ್ತು ದ್ರವ್ಯ ತ್ಯಾಜ್ಯಗಳ ನಿರ್ವಹಣೆ.

ii) ಸಂಪರ್ಕವಿಲ್ಲದ ಗ್ರಾಮಗಳಿಗೆ ಸರ್ವಋತು ರಸ್ತೆಗಳ ಸಂಪರ್ಕವನ್ನು ಒದಗಿಸುವುದು ಮತ್ತು ಗುರುತಿಸಲಾದ ಗ್ರಾಮೀಣ ಉತ್ಪನ್ನಗಳ ಕೇಂದ್ರಗಳನ್ನು ಹಾಲಿ ಇರುವ ಪಕ್ಕಾ ರಸ್ತೆಗಳಿಗೆ ಸಂಪರ್ಕವನ್ನು ಕಲ್ಪಿಸುವುದು ಮತ್ತು ಗ್ರಾಮದೊಳಗೆ ಪಕ್ಕಾ ಅಂತರ್ ರಸ್ತೆಗಳ ನಿರ್ಮಾಣ ಅಥವಾ ಗ್ರಾಮದೊಳಗೆ ಬೀದಿಗಳನ್ನು ಒಳಗೊಂಡಿರುವ ಬದಿ ಚರಂಡಿಗಳು ಮತ್ತು ಅಡಿಕಾಲುವೆಗಳು.

iii) ಆಟದ ಮೈದಾನಗಳ ನಿರ್ಮಾಣ ರಸ್ತೆಗಳನ್ನು ಪುನರ್‌ಸ್ಥಿತಿಗೆ ತರುವುದು ಅಥವಾ ವಿಪತ್ತು ನಿರ್ವಹಣೆಯ ಸಿದ್ದತೆಗಳನ್ನು ಸುಧಾರಣೆ ಮಾಡುವುದಕ್ಕೆ ಕಾಮಗಾರಿಗಳು ಅಥವಾ ಪ್ರವಾಹ ನಿಯಂತ್ರಣ ಸಂರಕ್ಷಣಾ ಕಾಮಗಾರಿಗಳು, ಜವಳು ಪ್ರದೇಶದಲ್ಲಿ ಚರಂಡಿಗಳನ್ನು ನಿರ್ಮಾಣ ಮಾಡುವುದು, ಆಳಗೊಳಿಸುವುದು, ಪ್ರವಾಹ ಕಾಲುವೆಗಳನ್ನು ದುರಸ್ತಿ ಮಾಡುವುದು, ತೋಡುಗಳನ್ನು ಜೀರ್ಣೋದ್ಧಾರ ಮಾಡುವುದು, ಕರಾವಳಿ ಪ್ರದೇಶಗಳ ಸಂರಕ್ಷಣೆಗಾಗಿ ನೀರಿನ ರಭಸದ ಚರಂಡಿಗಳ ನಿರ್ಮಾಣ.

iv) ತಾಲ್ಲೂಕು ಮಟ್ಟದಲ್ಲಿ ಅಥವಾ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡಗಳ ನಿರ್ಮಾಣ, ಮಹಿಳಾ ಸ್ವ ಸಹಾಯ ಗುಂಪುಗಳ ಸಂಯುಕ್ತ ಕೂಟಗಳು, ನೆರೆ ಹಾವಳಿಗೆ/ಪ್ರಕೃತಿ ವಿಕೋಪಕ್ಕೆ ಗುರಿಯಾದವರಿಗೆ ಆಶ್ರಯ ನೀಡುವ ಕಟ್ಟಡಗಳು, ಅಂಗನವಾಡಿ ಕೇಂದ್ರಗಳ ನಿರ್ಮಾಣ, ಗ್ರಾಮಗಳ ಗುಡಿಸಲುಗಳ ನಿರ್ಮಾಣ ಮತ್ತು ಗ್ರಾಮ ಪಂಚಾಯತಿ ಅಥವಾ ಬ್ಲಾಕ್ ಮಟ್ಟದಲ್ಲಿ ಚಿತಾಗಾರಗಳ ನಿರ್ಮಾಣ.

v) ರಾಷ್ಟ್ರೀಯ ಆಹಾರ ಭದ್ರತಾ ಅಧಿನಿಯಮ 2013ರ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಗೋದಾಮುಗಳ ನಿರ್ಮಾಣ.

vi) ಅಧಿನಿಯಮದಡಿ ನಿರ್ಮಾಣ ಕಾಮಗಾರಿಗಳ ಅಂದಾಜುಗಳಲ್ಲಿನ ಭಾಗವಾಗಿರುವಂತೆ ಕಾಮಗಾರಿಗಳ ನಿರ್ಮಾಣಕ್ಕಾಗಿ ಬೇಕಾಗಿರುವ ಕಟ್ಟಡ ಸಾಮಗ್ರಿಗಳ ಉತ್ಪಾದನೆ.

vii) ಅಧಿನಿಯಮದಡಿ ಸೃಷ್ಟಿಸಲಾದ ಗ್ರಾಮೀಣ ಸಾರ್ವಜನಿಕರ ಆಸ್ತಿಗಳ ನಿರ್ಮಾಣದ ನಿರ್ವಹಣೆ.

viii) ಈ ಸಂಬಂಧ ರಾಜ್ಯಸರ್ಕಾರದ ಸಮಾಲೋಚನೆಯೊಂದಿಗೆ ಕೇಂದ್ರ ಸರ್ಕಾರವು ಪ್ರಕಟಿಸಬಹುದಾದ ಇನ್ನಿತರೆ ಕಾಮಗಾರಿಗಳು (2) ಕಂಡಿಕೆ (9)ರ ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಸಂಪನ್ಮೂಲಗಳು ಮತ್ತು ಅಗತ್ಯತೆಗಳು, ಸ್ಥಳೀಯ ಪ್ರದೇಶದ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯಿತಿಯ ಗ್ರಾಮಸಭೆಗಳಲ್ಲಿ ಕಾಮಗಾರಿಗಳನ್ನು ಆದ್ಯತಾವಾರು ಶ್ರೇಣಿಯ ಮೇಲೆ ನಿರ್ಧರಿಸತಕ್ಕದ್ದು.

**ಸಮರ್ಪಕವಲ್ಲದ ಕಾಮಗಾರಿಗಳು, ಅಳತೆ ಮಾಡಲಾಗದ ಕಾಮಗಾರಿಗಳು, ಪುನರಾವರ್ತನೆ ಕಾಮಗಾರಿಗಳು ಅಂದರೆ, ಕಳೆಗಳನ್ನು ತೆಗೆಯುವುದು, ಕಲ್ಲುಗಳನ್ನು ತೆಗೆಯುವುದು ಮತ್ತು ಕೃಷಿ ಚಟುವಟಿಕೆಗಳನ್ನು ತೆಗೆದುಕೊಳ್ಳುವಂತಿಲ್ಲ.**

ಈ ಕೆಳಕಂಡ ಪ್ರವರ್ಗಗಳಿಗೆ ಸೇರಿದ ಕುಟುಂಬಗಳ / ಫಲಾನುಭವಿಗಳ ಜಮೀನುಗಳಲ್ಲಿ ಅಥವಾ ತೋಟದಲ್ಲಿ ವ್ಯಯುಕ್ತಿಕ ಆಸ್ತಿಗಳನ್ನು ಸೃಜಿಸುವ ಕಾಮಗಾರಿಗಳನ್ನು ಆದ್ಯತಾವಾರು ಶ್ರೇಣಿ ಮಾಡತಕ್ಕದ್ದು.

a) ಪರಿಶಿಷ್ಟ ಜಾತಿ
b) ಪರಿಶಿಷ್ಟ ಪಂಗಡ,
c) ಅಲೆಮಾರಿ ಜನಗಳು
d) ಪ್ರಕಟಣೆಯಿಂದ ತೆಗೆದುಹಾಕಿದ ಬುಡಕಟ್ಟು ಜನಾಂಗದವರು
e) ಬಡತನರೇಖೆ ಕೆಳಮಟ್ಟದಲ್ಲಿ ಇರುವ ಇತರೆ ಕುಟುಂಬಗಳು
f) ಸ್ತ್ರೀ ಪ್ರಧಾನ ಕುಟುಂಬಗಳು
g) ವಿಕಲಚೇತನ ಪ್ರಧಾನ ಕುಟುಂಬಗಳು
h) ಭೂಸುಧಾರಣಾ ಫಲಾನುಭವಿಗಳು
i) ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು
j) ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯಮಾಡುವ ಅಧಿನಿಯಮ 2006 (2007ರ 2) ಮೇಲಿನ ಪ್ರವರ್ಗಗಳಡಿ ಅರ್ಹ ಫಲಾನುಭವಿಗಳು ಪೂರ್ಣವಾದ ನಂತರ ಕೃಷಿ ಋಣ ಮನ್ನ ಮತ್ತು ಋಣ



ಪರಿಹಾರ ಯೋಜನೆ 2008ರಲ್ಲಿ ವಿವರಿಸಿದಂತೆ ಹಾಗೂ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಠ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಅಥವಾ ತೋಟದಲ್ಲಿ ಕೈಗೊಳ್ಳುವ ಕಾಮಗಾರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ ಷರತ್ತಿಗೆ ಒಳಪಟ್ಟಿರುವ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಲ್ಲಿ ಕೈಗೊಳ್ಳುವ ಕಾಮಗಾರಿಗಳು.

**ಆಸ್ತಿಗಳ ಉತ್ಪಾದನೆ ಮತ್ತು ಗುಣಮಟ್ಟವನ್ನು ಸುಧಾರಣೆ ಮಾಡಲು ಹಾಗೂ ಬಡತನದ ವಿವಿಧ ಪರಿಮಾಣಗಳಿಗೆ ಆಧಾರವಾಗಬಲ್ಲ ರೀತಿಯಲ್ಲಿ, ವಾಸ್ತವಿಕವಾಗಿ ಸಮೈಕತೆಯನ್ನು ತರುವ ಸಲುವಾಗಿ ಹಾಗೂ ಪರಿಣಾಮಕಾರಿಯಾಗಿ ಇತರೆ ಯೋಜನೆಗಳನ್ನು ಈ ಯೋಜನೆಯಡಿ ಒಗ್ಗೂಡಿಸುವಿಕೆಯ ಮೂಲಕ ಕಾಮಗಾರಿಗಳ ಅನುಷ್ಠಾನದ ಹಂತದ ಅಂತ್ಯದವರೆಗೆ ಅಂತರ್ ಇಲಾಖೆಗಳ ಒಗ್ಗೂಡಿಸುವಿಕೆಯನ್ನು ಸಾಧಿಸಲು ಅವಕಾಶವಿದೆ. ಸಾಮಾನ್ಯವಾಗಿ ಕೆಳಕಂಡಂತಹ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದಾಗಿದೆ.**

1) ಬೌಲ್ಡರ್ ಚೆಕ್
2) ಗೇಬಿಯನ್ ರಚನೆಗಳು
3) ಕೊಳಗಳು, ತೊಟ್ಟಿಗಳು, ಬಸಿತೊಟ್ಟಿಗಳು
4) ಒಳಕಾಲುವೆಗಳು
5) ಮಣ್ಣಿನಿಂದ ನಿರ್ಮಿಸಿದ ಜಲಾಶಯ
6) ಸ್ಪ್ರಿಂಗ್ ಶೆಡ್ ಅಭಿವೃದ್ಧಿ
   (ಅ) ಬಸಿಕಂದಕಗಳು (ಆ) ಪ್ಲಾಂಟೇಶನ್
7) ಚೆಕ್‌ಡ್ಯಾಂ
8) ಮಣ್ಣಿನ ಶೋಧಕದ ಮೂಲಕ ಬಾವಿಯನ್ನು ಕೃತಕವಾಗಿ ಪೂರಣ ಮಾಡುವುದು.
9) ನಿರಂತರ ಸಮಪಾತಳಿ ಕಂದಕರಗಳು/ ಕಾಲುವೆಗಳು, ಬಾಕ್ಸ್ ಕಾಲುವೆಗಳು
10) ಗಲ್ಲಿ ಪ್ಲಗ್ಸ್
11) ನರ್ಸರಿಗಳ ನಿರ್ಮಾಣ
12) ಕಾಡುಗಳ ಮತ್ತು ಜೈವಿಕ ವಲಯದ ಪುನರುಜ್ಜೀವನ
13) ಕುಂದಿದ ಕಾಡುಗಳನ್ನು ಪುನರುಜ್ಜೀವನ ಗೊಳಿಸಲು ಅರಣ್ಯೀಕರಣ ಮಾಡುವುದು ಮತ್ತು ಬಂಜರು ಭೂಮಿಯನ್ನು ಅರಣ್ಯವನ್ನಾಗಿ ಪರಿವರ್ತಿಸುವುದು
14) ರಸ್ತೆಗಳ/ಕಾಲುವೆಗಳ ಪಕ್ಕದಲ್ಲಿ ಪ್ಲಾಂಟೇಶನ್/ ಬ್ಲಾಕ್ ಪ್ಲಾಂಟೇಶನ್
15) ಕೆರೆ, ಕಾಲುವೆಗಳ ನಿರ್ಮಾಣ
16) ಆಟದ ಮೈದಾನಗಳು
17) ಬಹಿರ್ದೆಸೆ ಮುಕ್ತತೆಗೆ ಅವಕಾಶ.
18) ಕಿರಿಯ ಮತ್ತು ಅತಿ ಕಿರಿಯ ಕಾಲುವೆಗಳ ಮರು ಸ್ಥಾಪನೆ
19) ಸಮುದಾಯದ ಅಭ್ಯುದಯಕ್ಕಾಗಿ ನೀರಾವರಿ.
20) ಏತ ನೀರಾವರಿ
21) ಕ್ಷೇತ್ರ ಕಾಲುವೆ ನಿರ್ಮಾಣ
22) ನಾಲೆಗಳ ನಿರ್ಮಾಣ/ಕಾಲುವೆಗಳ ನಿರ್ಮಾಣ
23) ತೋಡು ಬಾವಿ

24) ತೋಟಗಾರಿಕೆ ಪ್ಲಾಂಟೇಶನ್‌ಗಳು/ ಬೌಂಡರಿ ಪ್ಲಾಂಟೇಶನ್/ ಬ್ಲಾಕ್ ಪ್ಲಾಂಟೇಶನ್

25) ರೇಷ್ಮೆ ಹುಳು ಸಾಕಾಣೆ (ಭೂ ಅಭಿವೃದ್ಧಿ ಮತ್ತು ಹಿಪ್ಪುನೇರಳೆ ಪ್ಲಾಂಟೇಶನ್)

26) ಪ್ರವಾಹ ನಿಯಂತ್ರಣಕ್ಕೆ ಗಟಾರಗಳ ನಿರ್ಮಾಣ /ಕಟ್ಟೆಗಳನ್ನು ಮೇಲ್ದರ್ಜೆಗಳಿಗೆ ಏರಿಸುವುದು/ ಕೃಷಿಗಾಗಿ ಕಟ್ಟೆಗಳನ್ನು ನಿರ್ಮಿಸುವುದು.

27) ವೈಯಕ್ತಿಕ ಕಾಮಗಾರಿಗಳು ಬಂಜರು ಅಥವಾ ಬೀಳು ಬಿದ್ದ ಭೂಮಿಯ ಅಭಿವೃದ್ಧಿ ಅಂತಹ ಕಾಮಗಾರಿಗಳು(ಅರ್ಹ ಫಲಾನುಭವಿಗಳಿಗೆ).

28) ಲವಣಯುಕ್ತ ಮತ್ತು ಕ್ಷಾರಯುಕ್ತ ಭೂಮಿಗಳ ಸುಧಾರಣೆ.

29) ಸಮೀಪದ ಕೆರೆಯಿಂದ ಹೂಳನ್ನು ತೆಗೆದು ಬಂಜರು ಭೂಮಿಯ ಮೇಲೆ ಹರಡುವುದು.

30) ಕೆರೆಗಳ ಹೂಳೆತ್ತುವ ಮೂಲಕ ಸಾಂಪ್ರದಾಯಕ ನೀರಿನ ಅಕರಗಳಾದ ಕೆರೆ, ಕೊಳ ಇತ್ಯಾದಿಗಳ

31) ಕೆರೆ/ಕಟ್ಟಡಗಳ ಜೀರ್ಣೋದ್ದಾರ.

32) ಉಪ್ಪಿನ ಅಂಶದಿಂದ ಭಾದಿತವಾದ ಭೂಮಿಯನ್ನು ಸುಧಾರಿಸುವುದು.

33) ಬೀಳುಬಿದ್ದ ಭೂಮಿಯ ಅಭಿವೃದ್ಧಿ

34) ಡೈವರ್ಷನ್ ನಾಲೆ/ ಡೈವರ್ಷನ್ ಕೋಡಿ

35) ಕರಾವಳಿ ಪ್ರದೇಶದಲ್ಲಿ ಚಂಡ ಮಾರುತದಿಂದ ಬರವ ನೀರಿಗಾಗಿ ಕಾಲುವೆಗಳ ನಿರ್ಮಾಣ.

36) ಮಧ್ಯಂತರ ಮತ್ತು ಸಂಪರ್ಕ ಕಾಲುವೆಗಳ ನಿರ್ಮಾಣ.

37) ಕಚ್ಚಾ ರಸ್ತೆ (ಮಣ್ಣಿನ ರಸ್ತೆ) /ಜಲ್ಲಿ ರಸ್ತೆ /WBM ರಸ್ತೆ / CC ರಸ್ತೆ

38) ಕ್ರಾಸ್ ಡ್ರೈನೇಜ್

39) ರಾಜೀವ್ ಗಾಂಧಿ ಸೇವಾ ಕೇಂದ್ರ

40) ಕಾಂಪೋಸ್ಟಿಂಗ್

41) ವರ್ಮಿ ಕಾಂಪೋಸ್ಟಿಂಗ್

42) ದ್ರವ ರೂಪದ ಗೊಬ್ಬರ, ಸಂಜೀವಕ್ ಅಥವಾ ಆಮೃತ್ ಪಾನಿ

43) ಮೇಕೆಗಳ ಕೊಟ್ಟಿಗೆ/ದನದ ಕೊಟ್ಟಿಗೆ

44) ರಾಸುಗಳ ಮೇವಾಗಿ ಅಜೋಲ್ಲಾ

45) ಸಾರ್ವಜನಿಕ ಸ್ಥಳಗಳಲ್ಲಿ ಮೀನುಗಾರಿಕೆ (ಋತುಗಳಿಗೆ ಸಂಬಂಧಿಸಿದಂತೆ)

ಅ) ಕೊಳಗಳ ನಿರ್ಮಾಣ ಆ) ಮೀನು ಒಣಗಿಸುವ ವೇದಿಕೆಗಳು

46) ಮರು ಪೂರಣ ಗುಂಡಿಗಳು (ಪಾಯಿಂಟ್ ರಿಚಾರ್ಜಿಗೆ)

47) ಶಾಲಾ ಶೌಚಾಲಯ ಘಟಕಗಳು.

48) ಅಂಗನವಾಡಿ ಶೌಚಾಲಯಗಳು.

49) ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ (SLWM)

50) ಗ್ರಾಮೀಣ ಆಹಾರ ಉಗ್ರಾಣ.

51) ಸ್ಮಶಾನ ಭೂ ಅಭಿವೃದ್ಧಿ.

52) ಆಟದ ಮೈದಾನ.

# ಅನುಬಂಧ – 2

## ಸ್ವಚ್ಛ ಭಾರತ್ ಮಿಷನ್ ಯೋಜನೆ (SBM)

**ನಿರ್ಮಲ ಭಾರತ್ ಅಭಿಯಾನ** / ಸ್ವಚ್ಛ ಭಾರತ್ ಮಿಷನ್ ನಡಿ ಈಗಾಗಲೇ ಎಲ್ಲಾ ಗ್ರಾಮಗಳಲ್ಲಿ ಅನುಷ್ಠಾನ ಮಾಡುತ್ತಿರುವುದರಿಂದ ಪೂರ್ಣ ಪ್ರಮಾಣದ ಬಯಲು ಬಹಿರ್ದೆಸೆ ಮುಕ್ತ ಮತ್ತು ಸ್ವಚ್ಛ ಗ್ರಾಮ ನಿರ್ಮಾಣ ಮಾಡುವುದು ಯೋಜನೆಯ ಮೂಲ ಉದ್ದೇಶವಾಗಿದೆ.

### 1. ಎಲ್ಲಾ ಮನೆಗಳಿಗೆ ಶೌಚಾಲಯ ಒದಗಿಸಿ ಬಳಸುವಂತೆ ಮಾಡುವುದು :

ಅ) ನಿರ್ಮಲ ಭಾರತ್ ಅಭಿಯಾನ / ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿಯಲ್ಲಿ 2012ರ ಬೇಸ್‌ಲೈನ್ ಸಮೀಕ್ಷೆಯಲ್ಲಿ ಶೌಚಾಲಯ ರಹಿತ ಎಂದು ಗುರುತಿಸಿರುವ ಬಿ.ಪಿ.ಎಲ್ ವರ್ಗಕ್ಕೆ ಸೇರಿದ ಎಲ್ಲಾ ಕುಟುಂಬಗಳು ಹಾಗೂ ನಿರ್ಬಂಧಿತ ಎ.ಪಿ.ಎಲ್ ವರ್ಗಕ್ಕೆ ಸೇರಿದ ಸಣ್ಣ ಹಾಗೂ ಅತಿ ಸಣ್ಣ ರೈತ ಕುಟುಂಬಗಳು, ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳು, ಅಂಗವಿಕಲರು, ಮಹಿಳಾ ಮುಖ್ಯಸ್ಥ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಕೆ ಮಾಡಿದರೆ ಅಂತಹ ಕುಟುಂಬಗಳಿಗೆ ಸ್ವಚ್ಛ ಭಾರತ್ ಮಿಷನ್ / ನಿರ್ಮಲ ಭಾರತ ಅಭಿಯಾನದ ಅಡಿಯಲ್ಲಿ ರೂ.12000/– ಗಳ ನಗದು ಪ್ರೋತ್ಸಾಹಧನ ಸೌಲಭ್ಯ ಪಡೆಯಬಹುದು.




ಆ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ (SC/ST) ಕುಟುಂಬಗಳಿಗೆ ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿಯಲ್ಲಿ ರೂ.12000/– ಹಾಗೂ ಅನುಸೂಚಿತ ಜಾತಿ

ಮತ್ತು ಅನುಸೂಚಿತ ಪಂಗಡದ ಕುಟುಂಬಗಳಿಗೆ ವಿಶೇಷ ನೆರವು ಘಟಕದಡಿಯಲ್ಲಿ ರೂ.3000/–ಗಳು ಸೇರಿ ಒಟ್ಟು ರೂ.15000/– ಗಳನ್ನು ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನವನ್ನಾಗಿ ಪಾವತಿಸಲು ಅವಕಾಶವಿರುತ್ತದೆ.

## 2. ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆ :

ಗ್ರಾಮಿಣ ಪ್ರದೇಶಗಳಲ್ಲಿನ ಸಂಪೂರ್ಣ ಸ್ವಚತೆಯನ್ನು ಸಾಧಿಸುವ ಉದ್ದೇಶದೊಂದಿಗೆ ಘನ ಹಾಗೂ ದ್ರವ ತ್ಯಾಜ್ಯಗಳ ನಿರ್ವಹಣೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಗ್ರಾಮಗಳು ಕಸ ಹಾಗೂ ಕೊಳಚೆಗಳಿಂದ ಮುಕ್ತ ಗ್ರಾಮಗಳನ್ನಾಗಿ ರೂಪಿಸಲು ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ಅನುದಾನವನ್ನು ಸ್ವಚ್ಛ ಭಾರತ್ ಮಿಷನ್ / ನಿರ್ಮಲ ಭಾರತ ಅಭಿಯಾನದ ಅಡಿಯಲ್ಲಿ ಒದಗಿಸಲಾಗುತ್ತದೆ.

1. 150 ಕ್ಕಿಂತ ಕಡಿಮೆ ಕುಟುಂಬಗಳಿರುವ ಗ್ರಾಮ ಪಂಚಾಯತಿಗೆ ರೂ 7 ಲಕ್ಷಗಳ ಅನುದಾನ
2. 150 ರಿಂದ 300 ಕುಟುಂಬಗಳಿರುವ ಗ್ರಾಮ ಪಂಚಾಯತಿಗೆ ರೂ 9 ಲಕ್ಷಗಳ ಅನುದಾನ
3. 300 ರಿಂದ 500 ಕುಟುಂಬಗಳಿರುವ ಗ್ರಾಮ ಪಂಚಾಯತಿಗೆ ರೂ 12 ಲಕ್ಷಗಳ ಅನುದಾನ
4. 500ಕ್ಕಿಂತ ಹೆಚ್ಚಿನ ಕುಟುಂಬಗಳಿರುವ ಗ್ರಾಮ ಪಂಚಾಯತಿಗಳಿಗೆ 20 ಲಕ್ಷಗಳ ಅನುದಾನವನ್ನು ಗ್ರಾಮಗಳ ಘನ ಹಾಗೂ ದ್ರವ ತ್ಯಾಜಗಳ ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ. ಇತರೆ ಯೋಜನೆಗಳೊಂದಿಗೆ ಸಹಭಾಗಿತ್ವ ಮಾಡಿಕೊಳ್ಳಬಹುದಾಗಿರುತ್ತದೆ.



5. ದ್ರವ ಹಾಗೂ ಘನ ತ್ಯಾಜ್ಯಗಳ ಸಮಗ್ರ ನಿರ್ವಹಣೆಗೆ ನೀಲಿ ನಕ್ಷೆ ತಯಾರಿಸಿ ಸರ್ಕಾರದ ಹಾಲಿ ಯೋಜನೆಗಳಲ್ಲಿನ ಅನುದಾನದ ಕೊರತೆಯನ್ನು ಗ್ರಾಮ ವಿಕಾಸ ಯೋಜನೆಯಡಿ ಭರಿಸಬಹುದಾಗಿರುತ್ತದೆ.



## 3. ಸಮುದಾಯ ಶೌಚಾಲಯಗಳ ನಿರ್ಮಾಣ :

ಗರಿಷ್ಟ ಮಟ್ಟದಲ್ಲಿ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿರುವಂತಹ ಗ್ರಾಮ/ ಗ್ರಾಮ ಪಂಚಾಯಿತಿಯಲ್ಲಿ/ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸ್ಥಳದ ಅಭಾವವಿರುವಂತಹ ಗ್ರಾಮ/ ಗ್ರಾಮ ಪಂಚಾಯಿತಿಗಳಲ್ಲಿ ಸಮುದಾಯ ಶೌಚಾಲಯವನ್ನು ನಿರ್ಮಾಣ ಮಾಡಲು ನಿರ್ಮಲ ಭಾರತ್ ಮಿಷನ್ ಕಾರ್ಯಕ್ರಮದಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಫಲಾನುಭವಿಗಳ ವಂತಿಗೆ 60:30:10ರ ಅನುಪಾತದಲ್ಲಿ ರೂ 2.00 ಲಕ್ಷಗಳ ಅನುದಾನವನ್ನು ಅಭಿಯಾನದಡಿಯಲ್ಲಿ ಒದಗಿಸಲಾಗುತ್ತಿದೆ.

## 4. ಐ.ಇ.ಸಿ ಚಟುವಟಿಕೆ:

ಸ್ವಚ್ಛತೆಯನ್ನು ನಿರಂತರವಾಗಿ ಕಾಯ್ದುಕೊಳ್ಳಲು ಸಮುದಾಯ ಸಂಘಟನೆ ಹಾಗೂ ನೈರ್ಮಲ್ಯ ಕುರಿತು ಗ್ರಾಮೀಣ ಸಮುದಾಯದಲ್ಲಿ ಅರಿವು ಮೂಡಿಸಲು ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಕಾಶವಿರುತ್ತದೆ.

ಮೇಲ್ಕಂಡ ಸ್ವಚ್ಛ ಭಾರತ್ ಅಭಿಯಾನದ ಘಟಕಗಳನ್ನು ಅನುಷ್ಠಾನ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುದಾನ ಒದಗಿಸಿದ್ದು ಕೊರತೆ ಬರುವ ಅನುದಾನವನ್ನು ಗ್ರಾಮ ವಿಕಾಸ ಯೋಜನೆಯಿಂದ ಭರಿಸಬಹುದಾಗಿರುತ್ತದೆ.

# ಅನುಬಂಧ – 3

**ಗ್ರಾಮ ವಿಕಾಸ ಯೋಜನೆಯಡಿ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ– ಸಂಜೀವಿನಿ ಸಂಸ್ಥೆಯಿಂದ ತೆಗೆದು ಕೊಳ್ಳಬಹುದಾದ ಕೆಲಸಗಳ ವಿವರ.**

**1. ಸ್ವಸಹಾಯ ಗುಂಪುಗಳ ರಚನೆ :**

ಗ್ರಾಮದಲ್ಲಿರುವ ಎಲ್ಲಾ ಬಡ ಮಹಿಳೆಯರ ಸಮೀಕ್ಷೆ ಕೈಗೊಂಡು ಸ್ವಸಹಾಯ ಸಂಘಗಳಿಗೆ ಸೇರದ ಎಲ್ಲಾ ಬಡ ಮಹಿಳೆಯರನ್ನು ಸ್ವಸಹಾಯ ಸಂಘದ ವ್ಯಾಪ್ತಿಗೆ ತರಲಾಗುವುದು. ಹೊಸ ಸಂಘಗಳ ರಚನೆ ಮತ್ತು ಕೆಲಸ ನಿರ್ವಹಿಸುತ್ತಿರುವ ಸ್ವಸಹಾಯ ಸಂಘಗಳಿಗೆ ಹೆಚ್ಚಿನ ಸದಸ್ಯರನ್ನು ಸೇರ್ಪಡೆ ಮಾಡಲಾಗುವುದು.

**2. ಸ್ವಸಹಾಯ ಸಂಘಗಳಿಗೆ ತರಬೇತಿ :**

ಎಲ್ಲಾ ಸ್ವಸಹಾಯ ಸಂಘಗಳ ಸದಸ್ಯರುಗಳಿಗೆ ಸ್ವಸಹಾಯ ಸಂಘಗಳು ಪಾಲಿಸಬೇಕಾದ ಪಂಚ ಸೂತ್ರಗಳ ಬಗ್ಗೆ ತರಬೇತಿ ನೀಡಲಾಗುವುದು. ಗ್ರಾಮದ ಪ್ರತಿ ಹತ್ತು ಸಂಘಗಳಿಗೆ ಒಬ್ಬ ಮಹಿಳೆಯನ್ನು ಸ್ವಸಹಾಯ ಸಂಘಗಳ ಲೆಕ್ಕ ನಿರ್ವಹಣೆಗಾಗಿ ಅವರಿಗೆ ಬುಕ್ಕ್ ಕೀಪಿಂಗ್ ಬಗ್ಗೆ ತರಬೇತಿ ನೀಡಲಾಗುವುದು. ಎಲ್ಲಾ ಸ್ವಸಹಾಯ ಸಂಘದ ಸದಸ್ಯರಿಗೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ತರಬೇತಿ ನೀಡಲಾಗುವುದು.

**3. ಸ್ವಸಹಾಯ ಸಂಘಗಳ ಆರ್ಥಿಕ ಸೇರ್ಪಡೆ :**

ಗ್ರಾಮದಲ್ಲಿರುವ ಎಲ್ಲಾ ಸ್ವಸಹಾಯ ಸಂಘಗಳ ಉಳಿತಾಯ ಖಾತೆಗಳನ್ನು ಸೇವಾ ಕ್ಷೇತ್ರದ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯಲು ಕ್ರಮವಹಿಸುವುದು. 3 ವರ್ಷಗಳ ಅವಧಿಯಲ್ಲಿ ಶೇಕಡ 80ರಷ್ಟು ಗುಂಪುಗಳಿಗೆ ಆರ್ಥಿಕ ಚಟುವಟಿಕೆಗಳಿಗಾಗಿ ಸಾಲ ಸೌಲಭ್ಯ ನೀಡಲು ಕ್ರಮವಹಿಸುವುದು.

**4. ಸ್ವಸಹಾಯ ಸಂಘಗಳ ಒಕ್ಕೂಟಗಳ ರಚನೆ :**

ಗ್ರಾಮದಲ್ಲಿರುವ ಎಲ್ಲಾ ಸ್ವಸಹಾಯ ಸಂಘಗಳನ್ನು ಸೇರಿಸಿ ಒಂದು ಒಕ್ಕೂಟವನ್ನು 3 ವರ್ಷಗಳ ಅವಧಿಯಲ್ಲಿ ರಚಿಸುವುದು.

**5. ಸ್ವಸಹಾಯ ಸಂಘಗಳಿಗೆ ಸುತ್ತುನಿಧಿ ಮತ್ತು ಒಕ್ಕೂಟಕ್ಕೆ ಸಮುದಾಯ ಬಂಡವಾಳ ನಿಧಿ [CIF] ನೀಡುವ ಬಗ್ಗೆ :**

ಗ್ರಾಮದಲ್ಲಿರುವ ಎಲ್ಲಾ ಅರ್ಹ ಸ್ವಸಹಾಯ ಸಂಘಗಳಿಗೆ ತಲಾ ರೂ.15,000/– ರಂತೆ ಮತ್ತು ಪ್ರತಿ ಒಕ್ಕೂಟಕ್ಕೆ ಪ್ರತಿ ಅರ್ಹ ಸ್ವಸಹಾಯ ಸಂಘಕ್ಕೆ ರೂ.50,000/– ರಂತೆ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುವುದು.

## 6. ನಿರುದ್ಯೋಗ ಯುವಕ ಮತ್ತು ಯುವತಿಯರಿಗೆ ಸ್ವಂತ ಉದ್ಯೋಗ ಮತ್ತು ವೇತನ ಆಧಾರಿತ ಉದ್ಯೋಗ ಒದಗಿಸುವ ಬಗ್ಗೆ :

ಗ್ರಾಮದಲ್ಲಿರುವ ಎಲ್ಲಾ ನಿರುದ್ಯೋಗ ಯುವಕ ಮತ್ತು ಯುವತಿಯ ಸಮೀಕ್ಷೆ ಕೈಗೊಳ್ಳುವುದು. ನಂತರ ಅವರ ಅಭಿರುಚಿ ಮತ್ತು ಅಸಕ್ತಿಗನುಗುಣವಾಗಿ ಸ್ವ–ಉದ್ಯೋಗ ಮತ್ತು ವೇತನ ಆಧಾರಿತ ಉದ್ಯೋಗ ಒದಗಿಸಲಾಗುವುದು.

### 6 ಎ) ರಾಜೀವ್ ಗಾಂಧಿ ಚೈತನ್ಯ ಯೋಜನೆ :

ಈ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮದಲ್ಲಿ ಎಲ್ಲಾ ಅರ್ಹ ಯುವಕ ಮತ್ತು ಯುವತಿಯರನ್ನು ಸ್ವ–ಉದ್ಯೋಗ ಮತ್ತು ವೇತನ ಆಧಾರಿತ ಉದ್ಯೋಗಕ್ಕೆ ಆಯ್ಕೆ ಮಾಡಲಾಗುವುದು. 3 ವರ್ಷಗಳ ಅವಧಿಯಲ್ಲಿ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗುವುದು. ಸ್ವ–ಉದ್ಯೋಗಕ್ಕಾಗಿ ಅಭ್ಯರ್ಥಿಗಳಿಗೆ ಅವಶ್ಯಕ ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. ವೇತನ ಆಧಾರಿತ ಉದ್ಯೋಗಕ್ಕಾಗಿ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ತರಬೇತಿ ನೀಡಿ ಉದ್ಯೋಗಾವಕಾಶ ಒದಗಿಸಲಾಗುವುದು.

### ಬಿ) ರುಡ್‌ಸೆಟ್ ಮತ್ತು ಆರ್ ಸೆಟ್ ಗಳ ಮೂಲಕ ತರಬೇತಿ :

ಯುವಕ ಮತ್ತು ಯುವತಿಯರ ಆಸಕ್ತಿಗನುಗುಣವಾಗಿ ಎಲ್ಲಾ ಬಿಪಿಎಲ್ ಅರ್ಹ ಅಭ್ಯರ್ಥಿಗಳಿಗೆ ಸ್ವಂತ ಉದ್ಯೋಗಕ್ಕಾಗಿ ಅವಶ್ಯಕ ತರಬೇತಿ ನೀಡಿ ಚಟುವಟಿಕೆ ಆರಂಭಿಸಲು ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುವುದು.



# ಅನುಬಂಧ – 4

## NRDWP ನೀರು ಶುದ್ಧೀಕರಣ ಘಟಕಗಳ ಸ್ಥಾಪನೆ

ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರನ್ನು ಕೊಳವೆ ಬಾವಿಗಳನ್ನು ಕೊರೆದು PWS, MWS, BWHP ಗಳ ಮೂಲಕ ಸುರಕ್ಷಿತ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇದರಲ್ಲಿ ಇತ್ತೀಚಿನ ಮಾಹಿತಿಯಂತೆ (2373 ಜನವಸತಿಗಳಲ್ಲಿ ರಾಸಾಯನಿಕ ಕಲುಷಿತತೆಯು (Chemical Contamination) ಕಂಡುಬಂದಿರುತ್ತದೆ. ಈ ರಾಸಾಯನಿಕ ಕಲುಷಿತೆಯು ಫ್ಲೋರೈಡ್, ಕಬ್ಬಿಣಾಂಶ, ನೈಟ್ರೇಟ್, ಗಡಸುತನವನ್ನು ಹೊಂದಿರುತ್ತದೆ. ಈ ರಾಸಾಯನಿಕಗಳು BIS – 10500–2012ರಲ್ಲಿ ನಿಗಧಿಪಡಿಸಿರುವ ಮಿತಿಯಲ್ಲಿ ಇರಬೇಕಾಗುತ್ತದೆ. ಆದುದರಿಂದ, ಮಿತಿಗಿಂತ ಹೆಚ್ಚಾಗಿರುವ ರಾಸಾಯನಿಕ ಅಂಶಗಳನ್ನು ತೆಗೆಯಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮವಹಿಸಬೇಕಾಗಿರುತ್ತದೆ. ಘಟಕಗಳ ಸಾಮರ್ಥ್ಯವು ಜನವಸತಿಯ ಜನಸಂಖ್ಯೆಗೆ ಅನುಗುಣವಾಗಿ ಗಂಟೆಗೆ 500 ಲೀಟರ್‌ನಿಂದ – 4000 ಲೀಟರ್‌ಗಳಿರುತ್ತವೆ. ಜಲಮೂಲದಲ್ಲಿನ ರಾಸಾಯನಿಕ ಕಲುಷಿತತೆ ಆಧರಿಸಿ ನೀರು ಶುದ್ಧೀಕರಣ ತಂತ್ರಜ್ಞಾನವನ್ನು ನಿರ್ಧರಿಸಬೇಕಾಗಿರುತ್ತದೆ.

ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿ ಜನಸಂಖ್ಯೆ ಹಾಗೂ ಘಟಕ ವೆಚ್ಚಗಳನ್ನು ಆಧರಿಸಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಬಹುದಾಗಿದೆ.

ಪ್ರಸ್ತುತ 500 LPH - 4000 LPH ಸಾಮರ್ಥ್ಯದ ಘಟಕಗಳ ವೆಚ್ಚ ಘಟಕದ ಸಂರಕ್ಷಣಾ ಕೊಠಡಿ ನಿರ್ಮಾಣ ಸೇರಿ ಕೆಳಕಂಡಂತೆ ಅಂದಾಜಿಸಲಾಗಿದೆ.

| ಘಟಕದ ಸಾಮರ್ಥ್ಯ LPH ನಲ್ಲಿ | ಘಟಕಗಳ ವೆಚ್ಚ ಘಟಕದ ಸಂರಕ್ಷಣಾ ಕೊಠಡಿ ನಿರ್ಮಾಣ ಸೇರಿ (ರೂ.ಲಕ್ಷಗಳಲ್ಲಿ) |
|---|---|
| 500 LPH | 10.00 |
| 1000 LPH | 10.00 |
| 2000 LPH | 10.00 |
| 4000 LPH | 12.00 |

ಘಟಕವನ್ನು ಸ್ಥಾಪಿಸಿದ ಸಂಸ್ಥೆಯೇ ಫಲಾನುಭವಿಗಳಿಂದ ಕನಿಷ್ಠ ದರವನ್ನು (ಪ್ರತಿ ಲೀಟರ್‌ಗೆ 10 ಪೈಸೆಯಂತೆ) ಪಡೆದು ಘಟಕದ ನಿರ್ವಹಣಾ ಜವಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಗ್ರಾಮೀಣ ಜನತೆಗೆ ನೇರವಾಗಿ ಒಂದು ರೂಪಾಯಿ ಮೌಲ್ಯದ ಎರಡು ನಾಣ್ಯಗಳನ್ನು ಆಟೋಮ್ಯಾಟಿಕ್ ನೀರು ಶುದ್ಧೀಕರಣ ಯಂತ್ರದಲ್ಲಿ ಹಾಕುವ ಮೂಲಕ 20 ಲೀಟರ್ ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳಬಹುದಾಗಿದೆ.

# ಅನುಬಂಧ – 5

## ಗ್ರಾಮ ವಿಕಾಸ ಯೋಜನೆಯ ಅನುಷ್ಠಾನ ವೇಳಾಪಟ್ಟಿ :

| ಕ್ರ.ಸಂ. | ಚಟುವಟಿಕೆಗಳು | ನಿಗದಿಪಡಿಸಿದ ಅವಧಿ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿಗಳು |
|---|---|---|---|
| 1 | ಗ್ರಾಮಗಳ ಆಯ್ಕೆ–ಸಂಬಂಧಪಟ್ಟ ಶಾಸಕರ ಶಿಫಾರಸ್ಸಿನೊಂದಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸುವುದು ಮತ್ತು ಸರ್ಕಾರಕ್ಕೆ ಸಲ್ಲಿಸುವುದು. | 15.07.2015 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 2. | ಜಿಲ್ಲೆಗಳಿಂದ ಬಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ನೀಡುವುದು. | 20.07.2015 | ಸರ್ಕಾರದ ಮಟ್ಟದಲ್ಲಿ. |
| 3. | ಆಯ್ಕೆಯಾದ ಗ್ರಾಮಗಳಲ್ಲಿ ವಾರ್ಡ್/ ಗ್ರಾಮ ಸಭೆ ಜರುಗಿಸಿ ಅಭಿವೃದ್ಧಿ ಯೋಜನೆಯನ್ನು ಸಾರ್ವಜನಿಕರ ಸಹಭಾಗಿತ್ವ ಮತ್ತು ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ತಯಾರಿಸಿಸುವುದು. ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆಯುವುದು. | 14.08.2015 | ಗ್ರಾಮ ಪಂಚಾಯತ್. |
| 4. | ಸಿವಿಲ್ ಕಾಮಗಾರಿಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಸುವುದು. | 31.08.2015 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 5. | ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡುವುದು. | 05.09.2015 | ಸಕ್ಷಮ ತಾಂತ್ರಿಕ ಅಧಿಕಾರಿಗಳು. |
| 6. | ಅಭಿವೃದ್ಧಿ ಯೋಜನೆಗೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು. | 05.09.2015 | ಗ್ರಾಮ ಪಂಚಾಯತ್ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ |

| | | | |
|---|---|---|---|
| 7. | ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದು. | 27.09.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 8. | ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಆರಂಭ ಮಾಡುವುದು. ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು. | 02.10.2015 | ಗ್ರಾಮ ಪಂಚಾಯತ್ ಮತ್ತು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 9. | ಮಾಹೆವಾರು ನಿಗಧಿತ ನಮೂನೆಯಲ್ಲಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | ಪ್ರತಿ ಮಾಹೆ | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 10. | ಹಣ ಬಿಡುಗಡೆ | ತ್ರೈ ಮಾಸಿಕ | ಸರ್ಕಾರವು ಪ್ರಗತಿಯನ್ನಾಧರಿಸಿ ಜಿಲ್ಲಾ ಪಂಚಾಯತ್‌ಗಳ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಚೆಕ್/EFMs ಮೂಲಕ ಹಣ ಬಿಡುಗಡೆ. |
| 11. | ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿ | ಪ್ರಗತಿಯನ್ನಾಧರಿಸಿ | ಗ್ರಾಮ ಪಂಚಾಯತ್‌ಗಳು ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣ ಪಾವತಿಸಬೇಕು. |
| 12. | ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಮುಕ್ತಾಯಗೊಳಿಸುವುದು. | 02.10.2016 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |



# ಸಂಕ್ಷೇಪಗಳು

| | | |
|---|---|---|
| BIS | - | Bureau of Indian Standards |
| BWHP | - | Bore Well With Hand Pump |
| CIF | - | Community Investment Fund<br>ಸಮುದಾಯ ಬಂಡವಾಳ ನಿಧಿ |
| EFMs | - | Electronic Fund Management System |
| KTPP | - | Karnataka Transparency in Public Procurements Act<br>ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ |
| LED | - | Light Emitting Diode |
| LPH | - | Liters Per Hour |
| MGNREGA | - | Mahatma Gandhi National Rural Employment Gurantee Act<br>ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ |
| MIS | - | Monitoring Information System<br>ಮಾಹಿತಿ ನಿರ್ವಹಣ ವ್ಯವಸ್ಥೆ |
| MWS | - | Mini Water Supply |
| NRDWP | - | National Rural Drinking Water Programme |
| NRLM | - | National Rural Livelihoods Mission |
| PWS | - | Piped Water Supply |
| SBM | - | Swachh Bharat Mission |
| SLWM | - | Solid & Liquid Waste Management Sysyem<br>ಘನ ಮತ್ತು ದ್ರವ್ಯ ತಾಜ್ಯಗಳ ನಿರ್ವಹಣೆ |

# ಟಿಪ್ಪಣಿ

## ಟಿಪ್ಪಣಿ

## ಟಿಪ್ಪಣಿ

ನಾಡ ಅಭಿವೃದ್ಧಿಗೆ, ಸಮೃದ್ಧಿಗೆ ಗ್ರಾಮ ವಿಕಾಸವೇ ಆಧಾರ

ವಿಕೇಂದ್ರೀಕೃತ, ಅಧಿಕಾರಯುಕ್ತ, ಪಂಚಾಯತ್ ವ್ಯವಸ್ಥೆಯೇ

ಅದರ ಪ್ರಬಲ ಸಾಧನ

ಗ್ರಾಮ ಆರೋಗ್ಯ, ಗ್ರಾಮ ಸ್ವಚ್ಛತೆ, ಗ್ರಾಮ ನೈರ್ಮಲ್ಯ ಸಾಧಿಸುತ್ತಾ

ಸರ್ವರ ಪಾಲ್ಗೊಳುವಿಕೆ ಖಾತ್ರಿಗೊಳಿಸುತ್ತಾ, ಸಮಾನತೆಯ,

ಸರ್ವೋದಯ ಸಮಾಜ ನಿರ್ಮಾಣದ ಹೊಸ ಪರ್ವಕ್ಕೆ

ನಮ್ಮ ಸರ್ಕಾರದ ದೃಢ ಸಂಕಲ್ಪ.

- ಸಿದ್ದರಾಮಯ್ಯ,

ಸನ್ಮಾನ್ಯ ಮುಖ್ಯಮಂತ್ರಿಗಳು

ವ್ಯಾಜ್ಯಮುಕ್ತ,

ತ್ಯಾಜ್ಯ ಮುಕ್ತ ಗ್ರಾಮ,

ಋಣ ಮುಕ್ತ,

ವ್ಯಸನ ಮುಕ್ತ ಮನಸ್ಸು,

ಬಯಲು ಬಹಿರ್ದೆಸೆ ಮುಕ್ತ

ಗ್ರಾಮಗಳನ್ನು ಕಟ್ಟೋಣ.

- ಎಚ್.ಕೆ. ಪಾಟೀಲ,

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು

ಗ್ರಾಮೀಣ ಬದುಕಿನ ಗುಣಾತ್ಮಕ ಬದಲಾವಣೆಗೆ
ಗ್ರಾಮ ವಿಕಾಸ ಯೋಜನೆ






ನಿಜವಾದ ಭಾರತ ಇರುವುದು ಹಳ್ಳಿಗಳಲ್ಲಿ.
ಹಳ್ಳಿಗಳು ನಾಶವಾದರೆ ಭಾರತವೂ ನಾಶವಾದಂತೆ.

- ಮಹಾತ್ಮ ಗಾಂಧೀಜಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು-560 001